# ಸರಕಾರಿ ಹಿರಿಯ ಪ್ರಾಥಮಿಕ ಶಾಲೆ

ತಾ॥ ಮುಧೋಳ **ಒಂಟಗೋಡಿ** ಜಿ॥ ಬಾಗಲಕೋಟೆ

# ಪಾಠ ಯೋಜನೆ 2023–24







## 7 ನೇ ತರಗತಿ
## ಗಣಿತ










ಶ್ರೀ. ಗಣಪತಿ ಕೋಲಾರ
(ಜಿ.ಪಿ.ಟಿ)
(ಗಣಿತ ಮತ್ತು ವಿಜ್ಞಾನ)



| ವಿಷಯ : ಗಣಿತ | ಪಾಠ ಯೋಜನೆ | ತರಗತಿ : 7 ನೇ ತರಗತಿ |
|---|---|---|
| ಘಟಕದ ಹೆಸರು : ಪೂರ್ಣಾಂಕಗಳು | ದಿನಾಂಕ : ರಿಂದ ವರೆಗೆ | |

| | |
|---|---|
| ಸಾಮರ್ಥ್ಯಗಳು : | 1) ಪೂರ್ಣಾಂಕಗಳ ಸಂಕಲನ ಮತ್ತು ವ್ಯವಕಲನದ ಗುಣಗಳನ್ನು ತಿಳಿಯುವುದು. |
| | 2) ಪೂರ್ಣಾಂಕಗಳ ಗುಣಾಕಾರವನ್ನು ತಿಳಿಯುವುದು. |
| | 3) ಪೂರ್ಣಾಂಕಗಳ ಗುಣಾಕಾರದ ಗುಣಧರ್ಮಗಳನ್ನು ತಿಳಿಯುವುದು. |
| | 4) ಪೂರ್ಣಾಂಕಗಳ ಭಾಗಾಕಾರ ಮತ್ತು ಅವುಗಳ ಗುಣಗಳನ್ನು ತಿಳಿಯುವುದು. |
| | |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ– ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ– ಅವಲೋಕನ |
|---|---|---|---|---|
| ತೊಡಗಿಸಿಕೊಳ್ಳುವಿಕೆ | * ಮಕ್ಕಳಿಗೆ ಸ್ವಾಭಾವಿಕ ಸಂಖ್ಯೆಗಳು ಮತ್ತು ಪೂರ್ಣ ಸಂಖ್ಯೆಗಳ ಬಗ್ಗೆ ವಿವರಿಸಿ, ಅವುಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಅವಲೋಕನ<br>ಸಾಧನ : ವ್ಯತ್ಯಾಸ ಗುರುತಿಸುವುದು | * ಸ್ವಾಭಾವಿಕ ಮತ್ತು ಪೂರ್ಣ ಸಂಖ್ಯೆಗಳ ನಡುವಿನ ವ್ಯತ್ಯಾಸ ಗುರುತಿಸುವರೇ? |
| ಪತ್ತೆಹಚ್ಚುವಿಕೆ | * ಮಕ್ಕಳಿಗೆ ಪ್ರಶ್ನೆಗಳನ್ನು ಕೇಳುತ್ತಾ, ಕಪ್ಪು ಹಲಗೆಯ ಮೇಲೆ ಬರೆಯುವುದು. 1) ಸ್ವಾಭಾವಿಕ ಸಂಖ್ಯೆಗಳಲ್ಲಿ ಅತಿ ಚಿಕ್ಕ ಸಂಖ್ಯೆ ಯಾವುದು? 2) ಸ್ವಾಭಾವಿಕ ಸಂಖ್ಯೆಗಳು ಯಾವ ಸಂಖ್ಯೆಯಿಂದ ಪ್ರಾರಂಭವಾಗುತ್ತದೆ? 3) ಪೂರ್ಣ ಸಂಖ್ಯೆಗಳಲ್ಲಿ ಅತಿ ಚಿಕ್ಕ ಸಂಖ್ಯೆ ಯಾವುದು? | ಚಟುವಟಿಕೆ | ತಂತ್ರ : ಅವಲೋಕನ<br>ಸಾಧನ : ಪ್ರಶ್ನೆಗಳು | * ಪೂರಕ ಪ್ರಶ್ನೆಗಳಿಗೆ ಉತ್ತರಿಸಲು ಪ್ರಯತ್ನಿಸುವರೇ? |
| ವಿವರಣೆ<br><br>* ಪೂರ್ಣಾಂಕಗಳ ಸಂಕಲನ ಮತ್ತು ವ್ಯವಕಲನದ ಗುಣಗಳು : | * ಸಂಖ್ಯಾ ರೇಖೆಯ ಮೇಲೆ ಪೂರ್ಣಾಂಕಗಳನ್ನು ಗುರುತಿಸುವುದನ್ನು ತಿಳಿಸುವುದರ ಮೂಲಕ ಪೂರ್ಣಾಂಕಗಳ ವಿಲೋಮವನ್ನು ವಿವರಿಸುವುದು.<br><br>* ಪೂರ್ಣಾಂಕಗಳ ಸಂಕಲನ ಮತ್ತು ವ್ಯವಕಲನ ಕುರಿತು ವಿವರಿಸುತ್ತಾ ಉದಾಹರಣೆಗಳ ಮೂಲಕ ಪರಿವರ್ತನೀಯ, ಸಹವರ್ತನೀಯ ಗುಣ, ಸಂಕಲನದ ಅನನ್ಯತಾಂಶಗಳ ಕುರಿತು ತಿಳಿಸುವುದು. | ಸಂಖ್ಯಾರೇಖೆ, ಚಾರ್ಟ್ | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಸಂಖ್ಯಾರೇಖೆಯ ಮೇಲೆ ಪೂರ್ಣಾಂಕಗಳನ್ನು ಗುರುತಿಸುವರೇ?<br>* ಪೂರ್ಣಾಂಕಗಳ ಸಂಕಲನ, ವ್ಯವಕಲನ ಗುಣಗಳನ್ನು ತಿಳಿಯುವರೇ? |

| ವಿಷಯ : ಗಣಿತ | | ತರಗತಿ : 7 ನೇ ತರಗತಿ | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ–ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ–ತಂತ್ರಗಳು** | **ಶಿಕ್ಷಕರ ಸ್ವ–ಅವಲೋಕನ** |
| * ಪೂರ್ಣಾಂಕಗಳ ಗುಣಾಕಾರ ಮತ್ತು ಗುಣಧರ್ಮಗಳು :<br><br>* ಪೂರ್ಣಾಂಕಗಳ ಭಾಗಾಕಾರ ಮತ್ತು ಗುಣಧರ್ಮಗಳು : | * ಪೂರ್ಣಾಂಕಗಳ ಗುಣಾಕಾರದ ನಿಯಮಗಳನ್ನು ಉದಾಹರಣೆಗಳ ಮೂಲಕ ತಿಳಿಸುವುದು. ಉದಾಹರಣೆಗಳ ಮೂಲಕ ಆವೃತ ಗುಣ, ಪರಿವರ್ತನೀಯ ಗುಣ, ಸಹವರ್ತನೀಯ ಗುಣ, ವಿಭಾಜಕ ಗುಣ, ಅನನ್ಯತಾಂಶಗಳ ಬಗ್ಗೆ ತಿಳಿಸುವುದು.<br>* ಉದಾಹರಣೆಗಳೊಂದಿಗೆ ಪೂರ್ಣಾಂಕಗಳ ಭಾಗಾಕಾರ ಮತ್ತು ಭಾಗಾಕಾರ ಗುಣಧರ್ಮಗಳ ಬಗ್ಗೆ ತಿಳಿಸುತ್ತಾ, ಪೂರ್ಣಾಂಕಗಳ ಭಾಗಾಕಾರಕ್ಕೆ ಸಂಬಂಧಿಸಿದಂತೆ ಆವೃತ ಗುಣ, ಪರಿವರ್ತನೀಯ ಗುಣ, ಸಹವರ್ತನೀಯ ಗುಣಗಳ ಬಗ್ಗೆ ತಿಳಿಸುವುದು. | ಸಂಖ್ಯಾರೇಖೆ, ಚಾರ್ಟ್ | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಪೂರ್ಣಾಂಕಗಳ ಗುಣಾಕಾರ ಮತ್ತು ಭಾಗಾಕಾರದ ಗುಣಧರ್ಮಗಳ ಬಗ್ಗೆ ತಿಳಿಯುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳನ್ನು ಗುಂಪುಗಳಲ್ಲಿ ವಿಂಗಡಿಸಿ ಪ್ರತಿ ಗುಂಪಿಗೆ ಒಂದೊಂದು ಮೂಲಕ್ರಿಯೆಯ ಮೇಲೆ ನಾಲ್ಕು ಲೆಕ್ಕಗಳನ್ನು ನೀಡಿ ಕಪ್ಪು ಹಲಗೆಯ ಮೇಲೆ ಬಿಡಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಅಭ್ಯಾಸ ಚಟುವಟಿಕೆ<br>ಸಾಧನ : ಗುಂಪು ಕಾರ್ಯ | * ಗುಂಪಿನಲ್ಲಿ ಸ್ಪರ್ಧಾ ಮನೋಭಾವ ಕಂಡುಬರುವುದೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಮತ್ತು ಅಭ್ಯಾಸ ಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ, ಅಭ್ಯಾಸ ಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಅಭ್ಯಾಸದ ಎಲ್ಲಾ ಲೆಕ್ಕಗಳನ್ನು ಬಿಡಿಸಲು ಪ್ರಯತ್ನಿಸುವರೇ? |

**ವಿಷಯ ಶಿಕ್ಷಕರ** **ಸಹಿ ಮುಖ್ಯಗುರುಗಳ ಸಹಿ**

| ವಿಷಯ : ಗಣಿತ | ಪಾಠ ಯೋಜನೆ | ತರಗತಿ : 7 ನೇ ತರಗತಿ |
|---|---|---|
| ಘಟಕದ ಹೆಸರು : ಭಿನ್ನರಾಶಿಗಳು ಮತ್ತು ದಶಮಾಂಶಗಳು | ದಿನಾಂಕ : ರಿಂದ ವರೆಗೆ | |

| ಸಾಮರ್ಥ್ಯಗಳು : | |
|---|---|
| | 1) ಭಿನ್ನರಾಶಿಗಳ ಗುಣಾಕಾರ ಮತ್ತು ಭಾಗಾಕಾರ ಕ್ರಿಯೆಗಳನ್ನು ತಿಳಿಯುವುದು. |
| | 2) ದಶಮಾಂಶ ಸಂಖ್ಯೆಗಳ ಗುಣಾಕಾರ ಮತ್ತು ಭಾಗಾಕಾರ ಕ್ರಿಯೆಗಳನ್ನು ತಿಳಿಯುವುದು. |
| | |
| | |
| | |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| ತೊಡಗಿಸಿಕೊಳ್ಳುವಿಕೆ | * ಹಿಂದಿನ ತರಗತಿಯಲ್ಲಿ ಕಲಿತ ವಿಷಯದ ಮೇಲೆ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು.<br>1) ಭಿನ್ನರಾಶಿಯ ಪ್ರಕಾರಗಳನ್ನು ತಿಳಿಸಿ?<br>2) 3/4 ಕ್ಕೆ ಎರಡು ಸಮಾನ ಭಿನ್ನರಾಶಿಗಳನ್ನು ಬರೆಯಿರಿ.<br>3) 0.5 ಅನ್ನು ಭಿನ್ನರಾಶಿಯಲ್ಲಿ ಬರೆಯಿರಿ.<br>4) 126.3 ರಲ್ಲಿ 15.25 ನ್ನು ಕಳೆಯಿರಿ. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪೂರಕ ಪ್ರಶ್ನೆಗಳು | * ಮಕ್ಕಳು ಪೂರ್ವ ಜ್ಞಾನ ಸ್ಮರಿಸಿ ಉತ್ತರಿಸುವರೇ? |
| ಪತ್ತೆಹಚ್ಚುವಿಕೆ | * ಮಕ್ಕಳಿಗೆ ಕೆಲವು ಲೆಕ್ಕಗಳನ್ನು ನೀಡಿ ಗುಂಪಿನಲ್ಲಿ ಚರ್ಚಿಸಿ ಮಾಡಲು ತಿಳಿಸುವುದು.<br>1) $3\frac{1}{2}+4\frac{2}{3}$ 2) $5+\frac{7}{8}$ 3) $\frac{5}{6}+\frac{4}{6}$ | ಪೂರಕ ಲೆಕ್ಕಗಳು | ತಂತ್ರ : ಚಟುವಟಿಕೆ<br>ಸಾಧನ : ಗುಂಪು ಕಾರ್ಯ | * ಮಕ್ಕಳು ಗುಂಪಿನಲ್ಲಿ ಚರ್ಚಿಸುವರೇ? |
| ವಿವರಣೆ<br>* ಭಿನ್ನರಾಶಿಗಳ ಗುಣಾಕಾರ ಮತ್ತು ಭಾಗಾಕಾರ : | * ಉದಾಹರಣ ಲೆಕ್ಕಗಳ ಮೂಲಕ ಭಿನ್ನರಾಶಿಗಳ ಗುಣಾಕಾರ ಮತ್ತು ಭಾಗಾಕಾರ ಲೆಕ್ಕಗಳನ್ನು ಬಿಡಿಸುವ ವಿಧಾನಗಳು ಮತ್ತು ನಿಯಮಗಳನ್ನು ತಿಳಿಸುವುದು.<br>ಉದಾ :1) $\frac{3}{5}\times\frac{2}{4}=\frac{3\times2}{5\times4}=\frac{6}{20}=\frac{3}{10}$<br>2) $\frac{2}{3}\div\frac{6}{4}=\frac{2}{3}\times\frac{4}{6}=\frac{8}{18}=\frac{4}{9}$ | ಪಠ್ಯ ಪುಸ್ತಕ, ಚಾರ್ಟ್ | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಭಿನ್ನರಾಶಿಗಳ ಗುಣಾಕಾರ ಮತ್ತು ಭಾಗಾಕಾರ ಮಾಡುವ ವಿಧಾನವನ್ನು ತಿಳಿಯುವರೇ? |

| ವಿಷಯ : ಗಣಿತ | | ತರಗತಿ : 7 ನೇ ತರಗತಿ | | |
|---|---|---|---|---|
| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
| * ದಶಮಾಂಶಗಳ ಗುಣಾಕಾರ ಮತ್ತು ಭಾಗಾಕಾರ : | * ಉದಾಹರಣ ಲೆಕ್ಕಗಳ ಮೂಲಕ ದಶಮಾಂಶಗಳ ಗುಣಾಕಾರ ಮತ್ತು ಭಾಗಾಕಾರ ಲೆಕ್ಕಗಳನ್ನು ಬಿಡಿಸುವ ವಿಧಾನಗಳು ಮತ್ತು ನಿಯಮಗಳನ್ನು ತಿಳಿಸುವುದು.<br>ಉದಾ : 1) $0.2 \times 0.4 = 0.08$<br>2) $6.8 \div 2 = 3.4$ | ಪಠ್ಯ ಪುಸ್ತಕ , ಚಾರ್ಟ್ | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ದಶಮಾಂಶಗಳ ಗುಣಾಕಾರ ಮತ್ತು ಭಾಗಾಕಾರ ಮಾಡುವ ವಿಧಾನವನ್ನು ತಿಳಿಯುವರೇ? |
| ವಿಷಯದ ವಿಸ್ತರಣೆ | * ಮಕ್ಕಳಿಗೆ ಭಿನ್ನರಾಶಿ ಮತ್ತು ದಶಮಾಂಶಗಳ ಮೇಲೆ ಎರಡು ಲೆಕ್ಕಗಳನ್ನು ನೀಡಿ ಗುಂಪಿನಲ್ಲಿ ಚರ್ಚಿಸಿ, ಕಪ್ಪುಹಲಗೆಯ ಮೇಲೆ ಬಿಡಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಅಭ್ಯಾಸ ಚಟುವಟಿಕೆ<br>ಸಾಧನ : ಗುಂಪು ಕಾರ್ಯ | * ಗುಂಪಿನಲ್ಲಿ ಚರ್ಚಿಸಿ ಲೆಕ್ಕಗಳನ್ನು ಬಿಡಿಸುವರೇ? |
| ಮೌಲ್ಯಮಾಪನ | * ಪಠ್ಯಪುಸ್ತಕದ ಮತ್ತು ಅಭ್ಯಾಸ ಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ, ಅಭ್ಯಾಸ ಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಅಭ್ಯಾಸದ ಎಲ್ಲಾ ಲೆಕ್ಕಗಳನ್ನು ಮಾಡಲು ಪ್ರಯತ್ನಿಸುವರೇ? |

ವಿಷಯ ಶಿಕ್ಷಕರ                                                                 ಸಹಿ ಮುಖ್ಯಗುರುಗಳ ಸಹಿ

| ವಿಷಯ : ಗಣಿತ | ಪಾಠ ಯೋಜನೆ | ತರಗತಿ : 7 ನೇ ತರಗತಿ |
|---|---|---|
| ಘಟಕದ ಹೆಸರು : ದತ್ತಾಂಶಗಳ ನಿರ್ವಹಣೆ | ದಿನಾಂಕ : ರಿಂದ ವರೆಗೆ | |

| ಸಾಮರ್ಥ್ಯಗಳು : | |
|---|---|
| | 1) ದತ್ತಾಂಶಗಳ ಸಂಗ್ರಹಣೆ ಮತ್ತು ಸಂಯೋಜನೆಯನ್ನು ತಿಳಿಯುವುದು. |
| | 2) ದತ್ತಾಂಶಗಳಿಗೆ ಸರಾಸರಿ, ,ವ್ಯಾಪ್ತಿ, ರೂಢಿಬೆಲೆ ಮತ್ತು ಮಧ್ಯಾಂಕವನ್ನು ಕಂಡುಹಿಡಿಯುವುದು. |
| | 3) ದತ್ತಾಂಶಗಳನ್ನು ಸ್ತಂಭಾಲೇಖ ಮತ್ತು ದ್ವಿ ಸ್ತಂಭಾಲೇಖಗಳ ಮೂಲಕ ಸೂಚಿಸುವ ವಿಧಾನವನ್ನು ತಿಳಿಯುವುದು. |
| | 4) ಅವಕಾಶ ಮತ್ತು ಸಂಭವನೀಯತೆಯನ್ನು ಅರ್ಥೈಸಿಕೊಂಡು ಘಟನೆಗಳ ಸಂಭವನೀಯತೆಯನ್ನು ಕಂಡುಹಿಡಿಯುವುದು. |
| | |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| ತೊಡಗಿಸಿಕೊಳ್ಳುವಿಕೆ | * ತರಗತಿಯಲ್ಲಿ ಯಾವ ಯಾವ ಮಕ್ಕಳು ಯಾವ ಯಾವ ಆಟಗಳನ್ನು ಆಡುವರು ಎಂಬುದರ ಮಾಹಿತಿ ಸಂಗ್ರಹಿಸಲು ಮಕ್ಕಳ ಗುಂಪುಗಳಿಗೆ ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಗುಂಪು ಕಾರ್ಯ | * ಮಕ್ಕಳು ಶಿಕ್ಷಕರು ಹೇಳಿದ ಮಾಹಿತಿಯನ್ನು ಸಂಗ್ರಹಿಸುವರೇ? |
| ಪತ್ತೆಹಚ್ಚುವಿಕೆ | * ಮಕ್ಕಳ ಗುಂಪುಗಳಿಗೆ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟ ಸೇವಿಸುವ ಮತ್ತು ಸೇವಿಸದಿರುವ ಮಕ್ಕಳ ಮಾಹಿತಿಯನ್ನು ತರಗತಿವಾರು ತಯಾರು ಮಾಡಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ನಿಯೋಜಿತ ಕಾರ್ಯ | * ನಿಯೋಜಿತ ಕಾರ್ಯವನ್ನು ವ್ಯವಸ್ಥಿತವಾಗಿ ನಿರ್ವಹಿಸುವರೇ? |
| **ವಿವರಣೆ**<br><br>* ದತ್ತಾಂಶಗಳ ಸಂಗ್ರಹಣೆ ಮತ್ತು ಸಂಯೋಜನೆ :<br><br>* ಸರಾಸರಿ :<br><br>* ವ್ಯಾಪ್ತಿ : | * ದತ್ತಾಂಶಗಳ ಸಂಗ್ರಹಣೆಯನ್ನು ಮಾದರಿ ಉದಾಹರಣೆಯೊಂದಿಗೆ ವಿವರಿಸುವುದು ಹಾಗೂ ದತ್ತಾಂಶಗಳ ಸಂಯೋಜನೆಯನ್ನು ತಿಳಿಸುವುದು.<br><br>* ಉದಾಹರಣೆಗಳ ಮೂಲಕ ಕೊಟ್ಟಿರುವ ದತ್ತಾಂಶಗಳ ಸರಾಸರಿ ಕಂಡುಹಿಡಿಯುವ ವಿಧಾನವನ್ನು ತಿಳಿಸುವುದು.<br><br>* ಉದಾಹರಣೆಗಳ ಮೂಲಕ ದತ್ತಾಂಶಗಳ ವ್ಯಾಪ್ತಿ ಕಂಡುಹಿಡಿಯುವ ವಿಧಾನವನ್ನು ತಿಳಿಸುವುದು. | ಗ್ರಾಫ್ ಚಾರ್ಟ್ | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ದತ್ತಾಂಶಗಳ ಸಂಗ್ರಹಣೆ ಮತ್ತು ಸಂಯೋಜನೆಯ ಬಗ್ಗೆ ತಿಳಿಯುವರೇ? |

| ವಿಷಯ : ಗಣಿತ | | | ತರಗತಿ : 7 ನೇ ತರಗತಿ | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ–ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ–ತಂತ್ರಗಳು** | **ಶಿಕ್ಷಕರ ಸ್ವ–ಅವಲೋಕನ** |
| * ರೂಢಿಬೆಲೆ :<br><br>* ಮಧ್ಯಾಂಕ :<br><br>* ಸ್ತಂಭಲೇಖ ಮತ್ತು ದ್ವಿ ಸ್ತಂಭಲೇಖ ರಚನೆ :<br><br>* ಅವಕಾಶ ಮತ್ತು ಸಂಭವನೀಯತೆ : | * ಉದಾಹರಣೆಗಳ ಮೂಲಕ ದತ್ತಾಂಶಗಳ ರೂಢಿಬೆಲೆ ಕಂಡುಹಿಡಿಯುವ ವಿಧಾನವನ್ನು ತಿಳಿಸುವುದು. ವೀಕ್ಷಣೆಗಳ ಗಣದ ರೂಢಿಬೆಲೆಯು ಅತ್ಯಂತ ಹೆಚ್ಚು ಬಾರಿ ಕಂಡುಬರುವ ವೀಕ್ಷಣೆಯಾಗಿರುತ್ತದೆ ಎಂಬುದನ್ನು ತಿಳಿಸುವುದು.<br><br>* ಕೊಟ್ಟಿರುವ ದತ್ತಾಂಶಗಳನ್ನು ಏರಿಕೆ ಅಥವಾ ಇಳಿಕೆ ಕ್ರಮದಲ್ಲಿ ಜೋಡಿಸಿದಾಗ ಮಧ್ಯದ ವೀಕ್ಷಣೆಯೇ ಮಧ್ಯಾಂಕ ವಾಗಿರುತ್ತದೆ ಎಂಬುದನ್ನು ಉದಾಹರಣೆಗಳ ಮೂಳಕ ತಿಳಿಸುವುದು.<br><br>* ಉದಾಹರಣೆಯೊಂದಿಗೆ ಸ್ತಂಭಲೇಖದ ಸ್ಕೇಲ್ ಹಾಗೂ ರಚಿಸುವ ಹಂತಗಳನ್ನು ವಿವರಿಸುವುದು. ಮತ್ತು ದ್ವಿ ಸ್ತಂಭ ಲೇಖ ರಚಿಸುವುದನ್ನು ಹಂತಗಳ ಮೂಲಕ ವಿವರಿಸುವುದು.<br><br>* ಅವಕಾಶ ಮತ್ತು ಸಂಭವನೀಯತೆಯ ಅರ್ಥವನ್ನು ಉದಾಹರಣೆಗಳೊಂದಿಗೆ ವಿವರಿಸುತ್ತಾ ಸಂಭವ ಅಥವಾ ನಿಶ್ಚಿತವನ್ನು ಸಾಂಖ್ಯಿಕವಾಗಿ ಅಳೆಯುವ ಪದವೇ ಸಂಭವನೀಯತೆ ಎಂದು ತಿಳಿಸುವುದು. | ಗ್ರಾಫ್ ಚಾರ್ಟ್ | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ದತ್ತಾಂಶಗಳ ಸರಾಸರಿ, ವ್ಯಾಪ್ತಿ, ರೂಢಿಬೆಲೆ, ಮಧ್ಯಾಂಕಗಳನ್ನು ಕಂಡು ಹಿಡಿಯುವ ವಿಧಾನಗಳನ್ನು ತಿಳಿಯುವರೇ?<br><br>* ಸ್ತಂಭಲೇಖ ಮತ್ತು ದ್ವಿ ಸ್ತಂಭಲೇಖ ರಚಿಸುವ ಬಗ್ಗೆ ತಿಳಿಯುವರೇ?<br><br>* ವಿವಿಧ ಘಟನೆಗಳ ಸಂಭವನೀಯತೆಯನ್ನು ತಿಳಿಯುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳಿಗೆ ದ್ವಿಸ್ತಂಭಲೇಖದ ಮೇಲಿನ ಸಮಸ್ಯೆಗಳನ್ನ ನೀಡಿ ಬಿಡಿಸಿಕೊಂಡು ಬರಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಗುಂಪು ಕಾರ್ಯ | * ಗುಂಪಿನಲ್ಲಿ ಚರ್ಚಿಸಿ ಲೆಕ್ಕಗಳನ್ನು ಬಿಡಿಸುವರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಮತ್ತು ಅಭ್ಯಾಸ ಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ, ಅಭ್ಯಾಸ ಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಅಭ್ಯಾಸದ ಎಲ್ಲಾ ಲೆಕ್ಕಗಳನ್ನು ಮಾಡಲು ಪ್ರಯತ್ನಿಸುವರೇ? |

**ವಿಷಯ ಶಿಕ್ಷಕರ** **ಸಹಿ ಮುಖ್ಯಗುರುಗಳ ಸಹಿ**

| ವಿಷಯ : ಗಣಿತ | ಪಾಠ ಯೋಜನೆ | ತರಗತಿ : 7 ನೇ ತರಗತಿ |
|---|---|---|
| ಘಟಕದ ಹೆಸರು : ಸರಳ ಸಮೀಕರಣಗಳು | ದಿನಾಂಕ : ರಿಂದ | ವರೆಗೆ |

| ಸಾಮರ್ಥ್ಯಗಳು : | |
|---|---|
| | 1) ಸರಳ ಸಮೀಕರಣದ ಅರ್ಥ ತಿಳಿಯುವುದು. |
| | 2) ಸರಳ ಸಮೀಕರಣವನ್ನು ಬಿಡಿಸುವುದು. |
| | 3) ಪರಿಹಾರದಿಂದ ಸರಳ ಸಮೀಕರಣವನ್ನು ಬಿಡಿಸುವುದು. |
| | 4) ಸರಳ ಸಮೀಕರಣದ ಅನ್ವಯಗಳನ್ನು ತಿಳಿಯುವುದು |
| | |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| ತೊಡಗಿಸಿಕೊಳ್ಳುವಿಕೆ | * ಮಕ್ಕಳಿಗೆ ಸಂಖ್ಯಾ ಆಟಗಳನ್ನು ಆಡಿಸುವುದು, ಮಕ್ಕಳನ್ನು ಎರಡು ಗುಂಪುಗಳಲ್ಲಿ ವಿಂಗಡಿಸಿ ಸಮ ಮತ್ತು ಬೆಸ ಸಂಖ್ಯೆಗಳನ್ನು ಹೇಳಿಸುವ ಆಟ ಆಡಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಗುಂಪು ಕಾರ್ಯ | * ಮಕ್ಕಳು ಆಸಕ್ತಿಯಿಂದ ಆಟವನ್ನು ಆಡುವರೇ? |
| ಪತ್ತೆಹಚ್ಚುವಿಕೆ | * ಮಕ್ಕಳಿಗೆ ಒಂದು ಸಂಖ್ಯೆಯನ್ನು ಮನಸಿನಲ್ಲಿ ಇಟ್ಟು ಕೊಳ್ಳಲು ಹೇಳುವುದು, ನಂತರ ಆ ಸಂಖ್ಯೆಯನ್ನು 4 ರಿಂದ ಗುಣಿಸಿ, ಗುಣಲಬ್ಧಕ್ಕೆ 12 ಅನ್ನು ಕೂಡಲು ಹೇಳಿ ಮೊತ್ತವನ್ನು ಹೇಳಿದಾಗ ಮಕ್ಕಳು ಮನಸ್ಸಿನಲ್ಲಿಟ್ಟುಕೊಂಡ ಸಂಖ್ಯೆಯನ್ನು ಹೇಳುವುದು, ನಂತರ ಸರಳ ಸಮೀಕರಣ ವನ್ನು ಪರಿಚಯಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಸಂಖ್ಯಾ ಆಟ | * ಮಕ್ಕಳು ಚಟುವಟಿಕೆಯಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವರೇ? |
| ವಿವರಣೆ<br><br>* ಸರಳ ಸಮೀಕರಣವನ್ನು ಬಿಡಿಸುವುದು : | * ಹಿಂದಿನ ತರಗತಿಯಲ್ಲಿ ಕಲಿತ ವಿಷಯವನ್ನು ಸ್ಮರಿಸುತ್ತಾ ಸರಳ ಸಮೀಕರಣದ ಅರ್ಥವನ್ನು ತಿಳಿಸುತ್ತಾ ಉದಾಹರಣೆಗಳನ್ನು ವಿವರಿಸುವುದು.<br>ಉದಾ : $8m + 4 = 44$, $n + 5 = 19$<br><br>* ಸರಳ ಸಮೀಕರಣದ ಸಮತೆಯ ಆಧಾರದ ಮೇಲೆ,<br>1) ಎರಡೂ ಬದಿಗಳಲ್ಲಿ ಸಂಖ್ಯೆಗಳನ್ನು ಕೂಡುವುದು.<br>2) ಎರಡೂ ಬದಿಗಳಲ್ಲಿ ಸಂಖ್ಯೆಗಳನ್ನು ಕಳೆಯುವುದು. | ಚಾರ್ಟ್ | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಸರಳ ಸಮೀಕರಣಗಳ ಅರ್ಥವನ್ನು ತಿಳಿಯುವರೇ? |

| ವಿಷಯ : ಗಣಿತ | | ತರಗತಿ : 7 ನೇ ತರಗತಿ | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ-ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ-ತಂತ್ರಗಳು** | **ಶಿಕ್ಷಕರ ಸ್ವ-ಅವಲೋಕನ** |
| * ಸರಳ ಸಮೀಕರಣಗಳ ಅನ್ವಯಗಳು : | 3) ಎರಡೂ ಬದಿಗೆ ಸಂಖ್ಯೆಗಳನ್ನು ಗುಣಿಸುವುದು. ಈ ವಿಧಾನಗಳ ಮೂಲಕ ಸಮೀಕರಣಗಳನ್ನು ಬಿಡಿಸುವ ರೀತಿಗಳನ್ನು ತಿಳಿಸುವುದು.<br><br>* ಸಮಸ್ಯೆಗಳನ್ನು ಬಿಡಿಸುವುದರ ಮೂಲಕ ಸರಳ ಸಮೀಕರಣಗಳ ಅನ್ವಯಗಳನ್ನು ತಿಳಿಸುವುದು.<br>ಉದಾ : ಒಂದು ಸಂಖ್ಯೆಯ 4 ರಷ್ಟು ಮತ್ತು 12 ರ ಮೊತ್ತ 32 ಆದರೆ ಆ ಸಂಖ್ಯೆ ಯಾವುದು? | | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಸಮೀಕರಣಗಳನ್ನು ಬಿಡಸಲು ಪ್ರಯತ್ನಿಸುವರೇ?<br><br>* ಅನ್ವಯಗಳನ್ನು ನಿತ್ಯ ಜೀವನದ ಸಮಸ್ಯೆಗಳನ್ನು ಬಿಡಲು ಬಳಸುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳನ್ನು ಗುಂಪುಗಳಲ್ಲಿ ವಿಂಗಡಿಸಿ ಪ್ರತಿ ಗುಂಪಿಗೆ ನಾಲ್ಕು ಸಮಸ್ಯೆಗಳನ್ನು ನೀಡಿ ಬಿಡಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಗುಂಪು ಕಾರ್ಯ | * ಸಮಸ್ಯೆಗಳನ್ನು ಬಿಡಿಸುವರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಮತ್ತು ಅಭ್ಯಾಸ ಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ, ಅಭ್ಯಾಸ ಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಅಭ್ಯಾಸದ ಎಲ್ಲಾ ಲೆಕ್ಕಗಳನ್ನು ಮಾಡಲು ಪ್ರಯತ್ನಿಸುವರೇ? |

**ವಿಷಯ ಶಿಕ್ಷಕರ** **ಸಹಿ ಮುಖ್ಯಗುರುಗಳ ಸಹಿ**

| ವಿಷಯ : ಗಣಿತ | ಪಾಠ ಯೋಜನೆ | ತರಗತಿ : 7 ನೇ ತರಗತಿ |
|---|---|---|
| ಘಟಕದ ಹೆಸರು : ರೇಖೆಗಳು ಮತ್ತು ಕೋನಗಳು | ದಿನಾಂಕ : ರಿಂದ | ವರೆಗೆ |

| | |
|---|---|
| ಸಾಮರ್ಥ್ಯಗಳು : | 1) ಪೂರಕ ಮತ್ತು ಪರಿಪೂರಕ ಕೋನಗಳನ್ನು ಅರಿಯುವುದು. |
| | 2) ಸರಳಯುಗ್ಮ ಮತ್ತು ಶೃಂಗಾಭಿಮುಖ ಕೋನಗಳ ಕುರಿತು ತಿಳಿಯುವರು |
| | 3) ಜೋಡಿ ರೇಖೆಗಳ ಅರ್ಥ, ಛೇದಿಸುವ ರೇಖೆಗಳು, ಸಮಾಂತರ ರೇಖೆಗಳು, ಅನುರೂಪ ಕೋನಗಳು ಪರ್ಯಾಯ ಕೋನಗಳು, ಅಂತರ್ ಕೋನಗಳು ಮತ್ತು ಬಾಹ್ಯ ಕೋನಗಳ ಬಗ್ಗೆ ತಿಳಿಯುವರು |
| | |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| **ತೊಡಗಿಸಿಕೊಳ್ಳುವಿಕೆ** | * ಕೋನಗಳ ಪ್ರಕಾರಗಳನ್ನು ಪಟ್ಟಿ ಮಾಡಲು ತಿಳಿಸುವುದು ಮತ್ತು ಅವುಗಳ ಮೇಲೆ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು. | ಚಟುವಟಿಕೆ | ತಂತ್ರ : ಚಟುವಟಿಕೆ ಸಾಧನ : ಪ್ರಶ್ನಿಸುವುದು | * ಮಕ್ಕಳು ಪೂರ್ವ ಜ್ಞಾನದಿಂದ ಉತ್ತರಿಸುವರೇ? |
| **ಪತ್ತೆಹಚ್ಚುವಿಕೆ** | * ಕಪ್ಪು ಹಲಗೆಯ ಮೇಲೆ ವಿವಿಧ ಕೋನಗಳನ್ನು ರಚಿಸಿ ಅವುಗಳ ವಿಧಗಳನ್ನು ಗುರುತಿಸಲು ಹೇಳುವುದು.  | ಚಟುವಟಿಕೆ | ತಂತ್ರ : ಚಟುವಟಿಕೆ ಸಾಧನ : ಚಿತ್ರಪಟ | * ಮಕ್ಕಳು ಕೋನಗಳ ವಿಧಗಳನ್ನು ಗುರುತಿಸುವರೇ? |
| **ವಿವರಣೆ** * ಪೂರಕ ಮತ್ತು ಪರಿಪೂರಕ ಕೋನಗಳು : | * ಎರಡು ಕೋನಗಳ ಅಳತೆಗಳ ಮೊತ್ತವು $90^\circ$ ಆಗಿದ್ದರೆ ಆ ಕೋನಗಳನ್ನು ಪೂರಕ ಕೋನಗಳು ಎನ್ನುವರು. ಇದೇ ರೀತಿಯಾಗಿ ಎರಡು ಕೋನಗಳ ಮೊತ್ತವು $180^\circ$ ಆಗಿದ್ದರೆ ಆ ಕೋನಗಳನ್ನು ಪರಿಪೂರಕ ಕೋನಗಳು ಎನ್ನುವರು.     | ಜ್ಯಾಮಿತಿ ಪೆಟ್ಟಿಗೆ | ತಂತ್ರ : ವಿವರಣೆ ಸಾಧನ : ಉದಾಹರಣೆಗಳು | * ಪೂರಕ ಮತ್ತು ಪರಿಪೂರಕ ಕೋನಗಳನ್ನು ಗುರುತಿಸುವರೇ? |

| ವಿಷಯ : ಗಣಿತ | | ತರಗತಿ : 7 ನೇ ತರಗತಿ | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ–ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ–ತಂತ್ರಗಳು** | **ಶಿಕ್ಷಕರ ಸ್ವ–ಅವಲೋಕನ** |
| * ಪಾರ್ಶ್ವ ಕೋನಗಳು, ಸರಳ ಯುಗ್ಮ ಮತ್ತು ಶೃಂಗಾಭಿಮುಖ ಕೋನಗಳು :<br><br>* ಜೋಡಿ ರೇಖೆಗಳು ಮತ್ತು ಛೇದಿಸುವ ರೇಖೆಗಳು : | * ಚಿತ್ರಗಳ ಮೂಲಕ ಪಾರ್ಶ್ವ ಕೋನಗಳು, ಸರಳ ಯುಗ್ಮ , ಮತ್ತು ಶೃಂಗಾಭಿಮುಖ ಕೋನಗಳ ಬಗ್ಗೆ ತಿಳಿಸುವುದು.<br><br>ಪಾರ್ಶ್ವ ಕೋನಗಳು ಸರಳಯುಗ್ಮ ಶೃಂಗಾಭಿಮುಕ ಕೋನ<br><br>* ಜೋಡಿ ರೇಖೆಗಳ ಅರ್ಥವನ್ನು ತಿಳಿಸುತ್ತಾ ಛೇದಿಸುವ ರೇಖೆಗಳ ಕುರಿತು ತಿಳಿಸುವುದು. ಛೇದಕ ರೇಖೆಗಳಿಂದ ಉಂಟಾದ ಪರ್ಯಾಯ ಕೋನಗಳು ಮತ್ತು ಪಾರ್ಶ್ವ ಕೋನಗಳು, ಅಂತರ್ ಕೋನಗಳು, ಬಹಿರ್ ಕೋನಗಳು ಹಾಗೂ ಅನುರೂಪ ಕೋನಗಳ ಬಗ್ಗೆ ತಿಳಿಸುವುದು.<br> | ಜ್ಯಾಮಿತಿಯ ಪೆಟ್ಟಿಗೆ | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಸರಳ ಯುಗ್ಮ ಗಳನ್ನು ವ್ಯಾಖ್ಯಾನಿಸುವರೇ?<br><br>* ಜೋಡಿ ರೇಖೆಗಳು ಮತ್ತು ಛೇದಕ ರೇಖೆಗಳ ಕುರಿತು ತಿಳಿಯುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳಿಗೆ ಪೂರಕ ಕೋನಗಳು, ಪರಿಪೂರಕ ಕೋನಗಳು, ಶೃಂಗಾಭಿಮುಖ ಕೋನಗಳು, ಪಾರ್ಶ್ವ ಕೋನಗಳು, ಪರ್ಯಾಯ ಕೋನಗಳ ಚಿತ್ರಪಟ ತಯಾರಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಚಿತ್ರ ರಚನೆ | * ಚಿತ್ರ ಪಟವನ್ನು ಅಚ್ಚು ಕಟ್ಟಾಗಿ ತಯಾರಿಸುವರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಮತ್ತು ಅಭ್ಯಾಸ ಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ, ಅಭ್ಯಾಸ ಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಅಭ್ಯಾಸದ ಎಲ್ಲಾ ಲೆಕ್ಕಗಳನ್ನು ಮಾಡಲು ಪ್ರಯತ್ನಿಸುವರೇ? |

**ವಿಷಯ ಶಿಕ್ಷಕರ** **ಸಹಿ ಮುಖ್ಯಗುರುಗಳ ಸಹಿ**

| ವಿಷಯ : ಗಣಿತ | **ಪಾಠ ಯೋಜನೆ** | ತರಗತಿ : 7 ನೇ ತರಗತಿ |
|---|---|---|

| ಘಟಕದ ಹೆಸರು : ತ್ರಿಭುಜ ಮತ್ತು ಅದರ ಗುಣಗಳು | ದಿನಾಂಕ : ರಿಂದ ವರೆಗೆ |
|---|---|
| ಸಾಮರ್ಥ್ಯಗಳು : | 1) ಒಂದು ತ್ರಿಭುಜದ ಮಧ್ಯ ರೇಖೆಗಳು ಮತ್ತು ಎತ್ತರಗಳ ಬಗ್ಗೆ ತಿಳಿಯುವುದು. |
| | 2) ಒಂದು ತ್ರಿಭುಜದ ಬಾಹ್ಯಕೋನ ಮತ್ತು ಅದರ ಗುಣಗಳನ್ನು ತಿಳಿಯುವುದು. |
| | 3) ತ್ರಿಭುಜದ ಒಳಕೋನಗಳ ಮೊತ್ತವನ್ನು ಪ್ರಾಯೋಗಿಕವಾಗಿ ತಿಳಿಯುವುದು. |
| | 4) ಎರಡು ವಿಶೇಷ ತ್ರಿಭುಜಗಳಾದ ಸಮಬಾಹು ಮತ್ತು ಸಮದ್ವಿಬಾಹು ತ್ರಿಭುಜಗಳ ಕುರಿತು ತಿಳಿಯುವುದು. |
| | 5) ಲಂಬಕೋನ ತ್ರಿಭುಜಗಳು ಮತ್ತು ಪೈಥಾಗೋರಸ್ ಗುಣವನ್ನು ಪ್ರಯೋಗಿಕವಾಗಿ ಪರಿಶೀಲಿಸುವುದು. |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ– ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ– ಅವಲೋಕನ |
|---|---|---|---|---|
| **ತೊಡಗಿಸಿಕೊಳ್ಳುವಿಕೆ** | * ಮಕ್ಕಳಿಗೆ ವಿವಿಧ ರೀತಿಯ ತ್ರಿಭುಜಗಳನ್ನು ರಚಿಸಲು ತಿಳಿಸುವುದು. ಹಾಗೂ ಅವುಗಳನ್ನು ಕಾಗದದಲ್ಲಿ ಕತ್ತರಿಸಿ ತೆಗೆಯಲು ಹೇಳುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಚಿತ್ರ ರಚನೆ | * ಪೂರ್ವ ಜ್ಞಾನ ಸ್ಮರಿಸಿ ಚಿತ್ರ ರಚಿಸುವರೇ? |
| **ಪತ್ತೆಹಚ್ಚುವಿಕೆ** | * ಮಕ್ಕಳಿಗೆ ಕೆಲವು ತ್ರಿಭುಜದ ವಿಧಗಳ ಚಿತ್ರಗಳನ್ನು ತೋರಿಸಿ ವಿಧಗಳನ್ನು ಗುರುತಿಸುವಂತೆ ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಗುರುತಿಸುವಿಕೆ | * ಮಕ್ಕಳು ತ್ರಿಭುಜದ ವಿಧಗಳನ್ನು ಗುರುತಿಸುವರೇ? |
| **ವಿವರಣೆ**<br>* ತ್ರಿಭುಜದ ಮಧ್ಯ ರೇಖೆಗಳು ಮತ್ತು ಎತ್ತರಗಳು : | * ಪ್ರಾಯೋಗಿಕ ರಚನೆಯ ಮೂಲಕ ತ್ರಿಭುಜದ ಮಧ್ಯ ರೇಖೆಗಳು ಮತ್ತು ಎತ್ತರಗಳ ಬಗ್ಗೆ ತಿಳಿಸುವುದು.<br>   <br>ತ್ರಿಭುಜ ABC ರಲ್ಲಿ AD ಮಧ್ಯರೇಖೆಯಾಗಿದೆ.<br>ತ್ರಿಭುಜ PQR ರಲ್ಲಿ PS ಎತ್ತರವಾಗಿದೆ. | ಜ್ಯಾಮಿತಿ ಪೆಟ್ಟಿಗೆ | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು, ಚಿತ್ರ ಪಟ | * ತ್ರಿಭುಜದ ಮಧ್ಯ ರೇಖೆ ಮತ್ತು ಎತ್ತರಗಳನ್ನು ಗುರುತಿಸುವರೇ? |

| ವಿಷಯ : ಗಣಿತ | | ತರಗತಿ : 7 ನೇ ತರಗತಿ | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ–ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ–ತಂತ್ರಗಳು** | **ಶಿಕ್ಷಕರ ಸ್ವ–ಅವಲೋಕನ** |
| * ಒಂದು ತ್ರಿಭುಜದ ಬಾಹ್ಯಕೋನ ಮತ್ತು ಅದರ ಗುಣ :   * ತ್ರಿಭುಜದ ಒಳಕೋನಗಳ ಮೊತ್ತದ ಗುಣ :   * ವಿಶೇಷ ತ್ರಿಭುಜಗಳು :  * ಪೈಥಾಗೋರಸ್ ಪ್ರಮೇಯ :   | * ತ್ರಿಭುಜದ ಒಂದು ಬಾಹ್ಯ ಕೋನವು ಅದರ ಅಂತರಾಭಿಮುಖ ಕೋನಗಳ ಮೊತ್ತಕ್ಕೆ ಸಮನಾಗಿರುತ್ತದೆ ಎಂದು ಸಾಧಿಸುವುದು, ಮತ್ತು ಸಮಸ್ಯೆಗಳನ್ನು ಬಿಡಿಸುವ ವಿಧಾನ ತಿಳಿಸುವುದು.<br><br>* ಒಂದು ತ್ರಿಭುಜದ ಮೂರು ಒಳಕೋನಗಳ ಮೊತ್ತ 180° ಗೆ ಸಮನಾಗಿರುತ್ತದೆ ಎಂದು ಸಾಧಿಸುವುದು. ಮತ್ತು ಸಮಸ್ಯೆಗಳನ್ನು ಬಿಡಿಸುವ ವಿಧಾನವನ್ನು ತಿಳಿಸುವುದು.<br><br>* ಚಿತ್ರಗಳ ಸಹಾಯದಿಂದ ವಿಶೇಷ ತ್ರಿಭುಜಗಳಾದ ಸಮಬಾಹು ಮತ್ತು ಸಮದ್ವಿಬಾಹು ತ್ರಿಭುಜಗಳ ಲಕ್ಷಣಗಳ ಬಗ್ಗೆ ತಿಳಿಸುವುದು.<br><br>* ಒಂದು ಲಂಬಕೋನ ತ್ರಿಭುಜದಲ್ಲಿ ವಿಕರ್ಣದ ಮೇಲಿನ ವರ್ಗವು ಉಳಿದೆರಡು ಬಾಹುಗಳ ಮೇಲಿನ ವರ್ಗಗಳ ಮೊತ್ತಕ್ಕೆ ಸಮವಾಗಿರುತ್ತದೆ ಎಂದು ಪ್ರಾಯೋಗಿಕವಾಗಿ ಸಾಧಿಸಿ ತೋರಿಸುವುದು. | ಜ್ಯಾಮಿತಿ ಪೆಟ್ಟಿಗೆ | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು, ಚಿತ್ರ ಪಟ | * ತ್ರಿಭುಜದ ಲಕ್ಷಣಗಳು ಮತ್ತು ನಿಯಮಗಳನ್ನು ತಿಳಿಯುವರೇ?<br><br>* ಪೈಥಾಗೋರಸ್‌ನ ಪ್ರಮೇಯವನ್ನು ಅರ್ಥೈಸಿಕೊಳ್ಳುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳನ್ನು ಗುಂಪುಗಳಲ್ಲಿ ವಿಂಗಡಿಸಿ ತ್ರಿಭುಜದಲ್ಲಿ ಎರಡು ಬಾಹುಗಳ ಮೊತ್ತವು ಮೂರನೇ ಬಾಹುವಿಗಿಂತ ಹೆಚ್ಚಾಗಿರುತ್ತದೆ ಎಂದು ಪ್ರಾಯೋಗಿಕವಾಗಿ ಸಾಧಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಮಾದರಿ ತಯಾರಿಕೆ | * ವಿಷಯವನ್ನು ಪ್ರಯೋಗಿಕವಾಗಿ ಸಾಧಿಸುವರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಮತ್ತು ಅಭ್ಯಾಸ ಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ, ಅಭ್ಯಾಸ ಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಅಭ್ಯಾಸದ ಎಲ್ಲಾ ಲೆಕ್ಕಗಳನ್ನು ಮಾಡಲು ಪ್ರಯತ್ನಿಸುವರೇ? |

**ವಿಷಯ ಶಿಕ್ಷಕರ** **ಸಹಿ ಮುಖ್ಯಗುರುಗಳ ಸಹಿ**

| ವಿಷಯ : ಗಣಿತ | **ಪಾಠ ಯೋಜನೆ** | ತರಗತಿ : 7 ನೇ ತರಗತಿ |
|---|---|---|

| ಘಟಕದ ಹೆಸರು : ತ್ರಿಭುಜಗಳ ಸರ್ವಸಮತೆ | ದಿನಾಂಕ : ರಿಂದ ವರೆಗೆ |
|---|---|

| | |
|---|---|
| **ಸಾಮರ್ಥ್ಯಗಳು :** | 1) ಸಮತಲಾಕೃತಿಗಳ ಸರ್ವಸಮತೆ ಮತ್ತು ರೇಖಾ ಖಂಡಗಳ ಸರ್ವಸಮತೆಯ ಬಗ್ಗೆ ತಿಳಿಯುವರು. |
| | 2) ತ್ರಿಭುಜಗಳ ಸರ್ವಸಮತೆಯ ನಿಬಂಧನೆಗಳಾದ ಬಾಬಾಬಾ, ಬಾಕೋಬಾ, ಕೋಬಾಕೋ, ಲಂಕಬಾ ಗಳನ್ನು ತಿಳಿಯುವುದು. |
| | 3) ಲಂಬಕೋನ ತ್ರಿಭುಜದಲ್ಲಿ ಸರ್ವಸಮತೆಯನ್ನು ತಿಳಿಯುವುದು. |
| | |
| | |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| **ತೊಡಗಿಸಿಕೊಳ್ಳುವಿಕೆ** | * ಒಂದೇ ಆಕಾರದ 1 ರೂಪಾಯಿಯ 2 ನಾಣ್ಯಗಳನ್ನು ನೀಡಿ ಒಂಧರ ಮೇಲೊಂದು ಕೂರುವಂತೆಜೋಡಿಸಲು ತಿಳಿಸುವುದು. ನಂತರ ಶಿಕ್ಷಕರು ಒಂಧು ಇನ್ನೊಂದರ ಮೇಲೆ ನಿಖರವಾಗಿ ಜೋಡಣೆಯಾಗಿದೆ ಎಂಬುದನ್ನು ಪ್ರಶ್ನಿಸುತ್ತಾ ಸರ್ವಸಮತೆಯ ಪರಿಕಲ್ಪನೆಯನ್ನು ಮೂಡಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪ್ರಶ್ನಿಸುವುದು | * ಸರ್ವಸಮತೆಯ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳುವರೇ? |
| **ಪತ್ತೆಹಚ್ಚುವಿಕೆ** | * ಮಕ್ಕಳಿಗೆ ಬಿಸ್ಕೆಟ್‌ಗಳು, ಒಂದು ನೋಟ್ ಬುಕ್‌ನ ಹಾಳೆಗಳು ಇತ್ಯಾದಿಗಳನ್ನು ತೋರಿಸಿ, ಅವುಗಳನ್ನು ಸರ್ವಸಮತೆ ಕುರಿತು ಪ್ರಶ್ನಿಸುವುದು. | ಬಿಸ್ಕಟ್‌ಗಳು, ಹಾಳೆಗಳು | ತಂತ್ರ : ಚಟುವಟಿಕೆ<br>ಸಾಧನ : ಪ್ರಶ್ನಿಸುವುದು | * ಸರ್ವಸಮ ರಚನೆಗಳನ್ನು ಗುರುತಿಸುವರೇ? |
| **ವಿವರಣೆ**<br>* ಸಮತಲ ಆಕೃತಿಗಳ ಸರ್ವಸಮತೆ : | * ಉದಾಹರಣೆಗಳ ಮೂಲಕ ರೇಖಾಗಣಿತ ಆಕೃತಿಗಳು ಒಂದೇ ಆಕಾರ ಮತ್ತು ಗಾತ್ರವನ್ನು ಹೊಂದಿದ್ದರೆ ಸರ್ವಸಮ ಎಂದು ಹೇಳುತ್ತೇವೆ ಎಂದು ತಿಳಿಸುವದು. ಮತ್ತು ಸರ್ವ ಸಮತೆಯ ಸಂಕೇತ ≅ ಎಂಬುದನ್ನು ತಿಳಿಸುವುದು.<br> | ಚಾರ್ಟ್, ಜ್ಯಾಮಿತಿಯ ಪೆಟ್ಟಿಗೆ | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಸಮತಲಾಕೃತಿಗಳು ಮತ್ತು ರೇಖಾ ಖಂಡಗಳ ಸರ್ವಸಮತೆಯ ಬಗ್ಗೆ ತಿಳಿಯುವರೇ? |

| ವಿಷಯ : ಗಣಿತ | ತರಗತಿ : 7 ನೇ ತರಗತಿ |
|---|---|

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| * ತ್ರಿಭುಜಗಳ ಸರ್ವಸಮತೆ ಮತ್ತು ತ್ರಿಭುಜ ಸರ್ವಸಮತೆಯ ನಿಬಂಧನೆಗಳು : | * ಉದಾಹರಣೆಗಳು ಮತ್ತು ಆಕೃತಿಗಳ ಮೂಲಕ ತ್ರಿಭುಜಗಳ ಸರ್ವಸಮತೆಯ ನಿಬಂಧನೆಗಳಾದ ಬಾಬಾಬಾ, ಬಾಕೋಬಾ, ಕೋಬಾಕೋ ಮತ್ತು ಲಂಕಬಾ ನಿಬಂಧನೆಗಳ ಬಗ್ಗೆ ತಿಳಿಸುವುದು, ಮತ್ತು ಸಮಸ್ಯೆಗಳನ್ನು ಬಿಡಿಸುವ ವಿಧಾನಗಳನ್ನು ವಿವರಿಸುವುದು.<br>1) **ಬಾಬಾಬಾ ನಿಬಂಧನೆ** :  <br>2) **ಬಾಕೋಬಾ ನಿಬಂಧನೆ** :  <br>3) **ಕೋಬಾಕೋ ನಿಬಂಧನೆ** :  <br>4) **ಲಂಕಬಾ ನಿಬಂಧನೆ** :   | ಜ್ಯಾಮಿತಿ ಪೆಟ್ಟಿಗೆ, ಆಕೃತಿಗಳು | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ತ್ರಿಭುಜಗಳ ಸರ್ವಸಮತೆಯ ನಿಬಂಧನೆಯನ್ನು ತಿಳಿಯುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳನ್ನು ಗುಂಪುಗಳಲ್ಲಿ ವಿಂಗಡಿಸಿ ತ್ರಿಭುಜಗಳ ಸರ್ವಸಮತೆಯ ನಿಬಂಧನೆಗಳ ಉದಾಹರಣೆಗಳನ್ನು ವಿವರಿಸಿಕೊಂಡುಬರಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಯೋಜನೆ | * ಗೃಹಪಾಠವನ್ನು ಮಾಡಿಕೊಂಡು ಬರುವರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಮತ್ತು ಅಭ್ಯಾಸ ಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ, ಅಭ್ಯಾಸ ಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಅಭ್ಯಾಸದ ಎಲ್ಲಾ ಲೆಕ್ಕಗಳನ್ನು ಮಾಡಲು ಪ್ರಯತ್ನಿಸುವರೇ? |

**ವಿಷಯ ಶಿಕ್ಷಕರ** **ಸಹಿ ಮುಖ್ಯಗುರುಗಳ ಸಹಿ**

| ವಿಷಯ : ಗಣಿತ | ಪಾಠ ಯೋಜನೆ | ತರಗತಿ : 7 ನೇ ತರಗತಿ |
|---|---|---|
| ಘಟಕದ ಹೆಸರು : ಪರಿಮಾಣಗಳ ಹೋಲಿಕೆ | ದಿನಾಂಕ : ರಿಂದ | ವರೆಗೆ |

| | |
|---|---|
| ಸಾಮರ್ಥ್ಯಗಳು : | 1) ಸಮಾನುಪಾತದ ಅರ್ಥ ತಿಳಿದು ಸಮಸ್ಯೆಗಳನ್ನು ಬಿಡಿಸುವುದು. 2) ಶೇಕಡಾಕ್ರಮದಿಂದ ಪರಿಮಾಣಗಳ ಹೋಲಿಕೆ ಹಾಗೂ |
| | ಭಿನ್ನರಾಶಿಯನ್ನು ಶೇಕಡಾಕ್ರಮಕ್ಕೆ ಬದಲಾಯಿಸುವುದು ಹಾಗೂ ದಶಮಾಂಶಗಳನ್ನು ಶೇಕಡಾಕ್ಕೆ ಪರಿವರ್ತಿಸುವುದು. |
| | 3) ಶೇಕಡಾ ಬೆಲೆಯನ್ನು ಭಿನ್ನರಾಶಿಗೆ ಮತ್ತು ದಶಮಾಂಶಕ್ಕೆ ಪರಿವರ್ತಿಸುವುದು. 4) ಸರಳ ಬಡ್ಡಿ ಲೆಕ್ಕಾಚಾರ ಮಾಡುವುದು. |
| | 5) ಶೇಕಡಾದ ಉಪಯೋಗಗಳನ್ನು ತಿಳಿಯುವುದು. |
| | 6) ಶೇಕಡಾ ಲಾಭ ಮತ್ತು ಶೇಕಡಾ ನಷ್ಟಗಳನ್ನು ಅರಿತು ಸಮಸ್ಯೆಗಳನ್ನು ಬಿಡಿಸುವುದು. |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| ತೊಡಗಿಸಿಕೊಳ್ಳುವಿಕೆ | * ಮಕ್ಕಳಿಗೆ ತಮ್ಮ ಎತ್ತರಗಳನ್ನು ತಮ್ಮ ಸ್ನೇಹಿತರ ಎತ್ತರಗಳೊಂದಿಗೆ ಹೋಲಿಸಿಕೊಳ್ಳಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಗುಂಪು ಕಾರ್ಯ | * ಎತ್ತರಗಳನ್ನು ಹೋಲಿಸಿಕೊಳ್ಳು ವರೇ? |
| ಪತ್ತೆಹಚ್ಚುವಿಕೆ | * ಶಿಕ್ಷಕರು ಮಕ್ಕಳಿಗೆ ಅನುಪಾತದ ಮೇಲಿನ ಲೆಕ್ಕಗಳನ್ನು ನೀಡುವುದು 1) 5 : 10 ಮತ್ತು 12 : 4 ಇವುಗಳನ್ನು ಭಿನ್ನರಾಶಿ ರೂಪದಲ್ಲಿ ಬರೆಯಿರಿ. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪ್ರಶ್ನಿಸುವುದು | * ಮಕ್ಕಳು ಪೂರ್ವ ಜ್ಞಾನ ಬಳಸಿ ಲೆಕ್ಕಗಳನ್ನು ಬಿಡಿಸುವರೇ? |
| ವಿವರಣೆ<br><br>* ಸಮಾನುಪಾತ :<br><br>* ಶೇಕಡಾ ಕ್ರಮದಿಂದ ಪರಿಮಾಣಗಳ ಹೋಲಿಕೆ : | * ಸಮಾನುಪಾತದ ಅರ್ಥವನ್ನು ಉದಾಹರಣೆಗಳೊಂದಿಗೆ ವಿವರಿಸುತ್ತಾ ಸಮಾನುಪಾತದ ಮೇಲಿನ ಲೆಕ್ಕಗಳನ್ನು ಬಿಡಿಸುವ ವಿಧಾನವನ್ನು ವಿವರಿಸುವುದು.<br>ಉದಾ ; 5 ರೂ ಮತ್ತು 50 ಪೈಸೆಗೆ ಇರುವ ಅನುಪಾತ<br>500 ಪೈಸೆ : 50 ಪೈಸೆ = 10 : 1<br><br>* ಶೇಕಡಾ ಕ್ರಮದಿಂದ ಪರಿಮಾಣಗಳ ಹೋಲಿಕೆಯನ್ನು ಉದಾಹರಣೆಗಳ ಮೂಲಕ ವಿವರಿಸುವುದು.<br>ಉದಾ : ರವಿ ಪಡೆದ ಅಂಕಗಳು = 480/600 = 80 %<br>ಅಕ್ಷಯ ಪಡೆದ ಅಂಕಗಳು = 300/360 = 83.33 % | ಚಾರ್ಟ್, | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಸಮಾನುಪಾತದ ಲೆಕ್ಕ ಗಳನ್ನು ಬಿಡಿಸುವರೇ?<br><br>* ಶೇಕಡಾ ಕ್ರಮದಿಂದ ಪರಿಮಾಣಗಳನ್ನು ಹೋಲಿಸಿ ವಿಶ್ಲೇಷಿಸುವರೇ? |

| ವಿಷಯ : ಗಣಿತ | ತರಗತಿ : 7 ನೇ ತರಗತಿ |
|---|---|

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| * ಶೇಕಡಾದ ಉಪಯೋಗಗಳು :<br><br>* ಸರಳ ಬಡ್ಡಿಯ ಲೆಕ್ಕಾಚಾರ | * ಶೇಕಡಾದ ಉಪಯೋಗಗಳನ್ನು ಉದಾಹರಣೆಗಳ ಮೂಲಕ ವಿವರಿಸುವುದು.<br>* $\text{ಶೇಕಡಾ ಲಾಭ} = \frac{\text{ಲಾಭ}}{\text{ಕೊಂಡ ಬೆಲೆ}} \times 100$<br>* $\text{ಶೇಕಡಾ ನಷ್ಟ} = \frac{\text{ನಷ್ಟ}}{\text{ಕೊಂಡ ಬೆಲೆ}} \times 100$<br>* ಸರಳ ಬಡ್ಡಿಯ ಸೂತ್ರವನ್ನು ವಿವರಿಸಿ ಸೂತ್ರದ ಸಹಾಯದಿಂದ ಬಡ್ಡಿ ಕಂಡು ಹಿಡಿಯುವ ಹಾಗೂ ಮೊತ್ತವನ್ನು ಕಂಡು ಹಿಡಿಯುವ ವಿಧಾನವನ್ನು ಉದಾಹರಣೆಗಳೊಂದಿಗೆ ವಿವರಿಸುವುದು.<br>$\text{ಸರಳ ಬಡ್ಡಿ} = \frac{PTR}{100}$ | ಚಾರ್ಟ್, | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಶೇಕಡಾದ ಉಪಯೋಗಗಳನ್ನು ತಿಳಿಯುವರೇ?<br><br>* ಸರಳ ಬಡ್ಡಿ ಲಕ್ಕಾಚಾರ ಮಾಡುವ ವಿಧಾನವನ್ನು ತಿಳಿಯುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳನ್ನು ಗುಂಪುಗಳಲ್ಲಿ ವಿಂಗಡಿಸಿ ಒಂದೊಂದು ಗುಂಪಿಗೆ ಪರಿಮಾಣಗಳ ಹೋಲಿಕೆಯ ಮೇಲೆ ಎರಡು ಲೆಕ್ಕಗಳನ್ನು ನೀಡಿ ಗುಂಪಿನಲ್ಲಿ ಚರ್ಚಿಸಿ ಬಿಡಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಅಭ್ಯಾಸ ಲೆಕ್ಕಗಳು | * ಗುಂಪಿನಲ್ಲಿ ಚರ್ಚಿಸಿ ಲೆಕ್ಕಗಳನ್ನು ಬಿಡಿಸುವರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಮತ್ತು ಅಭ್ಯಾಸ ಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ, ಅಭ್ಯಾಸ ಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಅಭ್ಯಾಸದ ಎಲ್ಲಾ ಲೆಕ್ಕಗಳನ್ನು ಮಾಡಲು ಪ್ರಯತ್ನಿಸುವರೇ? |

**ವಿಷಯ ಶಿಕ್ಷಕರ** | **ಸಹಿ ಮುಖ್ಯಗುರುಗಳ ಸಹಿ**

| ವಿಷಯ : ಗಣಿತ | ಪಾಠ ಯೋಜನೆ | ತರಗತಿ : 7 ನೇ ತರಗತಿ |
|---|---|---|
| ಘಟಕದ ಹೆಸರು : ಭಾಗಲಬ್ಧ ಸಂಖ್ಯೆಗಳು | ದಿನಾಂಕ : ರಿಂದ | ವರೆಗೆ |

| ಸಾಮರ್ಥ್ಯಗಳು : | |
|---|---|
| | 1) ಭಾಗಲಬ್ಧ ಸಂಖ್ಯೆಗಳ ಅಗತ್ಯತೆ ಮತ್ತು ಅರ್ಥವನ್ನು ವಿವರಿಸುವುದು. |
| | 2) ಧನ ಮತ್ತು ಋಣ ಭಾಗಲಬ್ಧ ಸಂಖ್ಯೆಗಳು ಹಾಗೂ ಭಾಗಲಬ್ಧ ಸಂಖ್ಯೆಗಳನ್ನು ಸಂಖ್ಯಾರೇಖೆಯ ಮೇಲೆ ಗುರುತಿಸುವುದು. |
| | 3) ಭಾಗಲಬ್ಧ ಸಂಖ್ಯೆಗಳನ್ನು ಆದರ್ಶ ರೂಪದಲ್ಲಿ ಬರೆಯುವುದು ಮತ್ತು ಭಾಗಲಬ್ಧ ಸಂಖ್ಯೆಗಳನ್ನು ಹೋಲಿಸುವುದು. |
| | 4) ಭಾಗಲಬ್ಧ ಸಂಖ್ಯೆಗಳ ಮೂಲಕ್ರಿಯೆಗಳನ್ನು ಮಾಡುವುದು. |
| | |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| **ತೊಡಗಿಸಿಕೊಳ್ಳುವಿಕೆ** | * ಮಕ್ಕಳಿಗೆ ಸ್ವಾಭಾವಿಕ ಸಂಖ್ಯೆಗಳು, ಪೂರ್ಣ ಸಂಖ್ಯೆಗಳು ಮತ್ತು ಪೂರ್ಣಾಂಕಗಳ ಮೇಲೆ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು.<br>1) ಸ್ವಾಭಾವಿಕ ಸಂಖ್ಯೆಗಳ ಗಣ ಬರೆಯಿರಿ? ಮುಂತಾದವುಗಳು | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪ್ರಶ್ನೆಗಳು | * ಮಕ್ಕಳು ಪೂರ್ವ ಜ್ಞಾನದಿಂದ ಉತ್ತರಿಸುವರೇ? |
| **ಪತ್ತೆಹಚ್ಚುವಿಕೆ** | * ಭಿನ್ನರಾಶಿಗಳ ಮೇಲೆ ಲೆಕ್ಕಗಳನ್ನು ನೀಡುವುದು.<br>1) ಈ ಭಿನ್ನರಾಶಿಗಳನ್ನು ಕನಿಷ್ಠ ರೂಪಕ್ಕೆ ತನ್ನಿ :<br>$\frac{4}{8}, \frac{3}{18}, \frac{15}{25}, \frac{90}{10}, \frac{6}{24}$ | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪ್ರಶ್ನಿಸುವುದು | * ಭಿನ್ನರಾಶಿ ಮೇಲಿನ ಲೆಕ್ಕಗಳನ್ನು ಬಿಡಿಸುವರೇ? |
| **ವಿವರಣೆ**<br>* ಭಾಗಲಬ್ಧ ಸಂಖ್ಯೆಗಳ ಅಗತ್ಯತೆ ಮತ್ತು ಅರ್ಥ :<br>* ಧನ ಮತ್ತು ಋಣ ಭಾಗಲಬ್ಧ ಸಂಖ್ಯೆಗಳು : | * ಭಾಗಲಬ್ಧ ಸಂಖ್ಯೆಗಳ ಅರ್ಥವನ್ನು ವಿವರಿಸುತ್ತಾ ಅವುಗಳ ಅಗತ್ಯತೆಯನ್ನು ಉದಾಹರಣೆಗಳ ಸಹಾಯದಿಂದ ವಿವರಿಸುವುದು.<br>$\frac{a}{b}$ ಇದು ಭಾಗಲಬ್ಧ ಸಂಖ್ಯೆಯಾಗಿದ್ದು ಇಲ್ಲಿ $a \neq 0$, $a$ ಮತ್ತು $b$ ಗಳು ಪೂರ್ಣಾಂಕಗಳಾಗಿವೆ.<br>* ಉದಾಹರಣೆಗಳ ಮೂಲಕ ಧನ ಮತ್ತು ಋಣ ಭಾಗಲಬ್ಧ ಸಂಖ್ಯೆಗಳನ್ನು ವಿವರಿಸುವುದು. | ಸಂಖ್ಯಾರೇಖೆ | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಭಾಗಲಬ್ಧ ಸಂಖ್ಯೆಗಳನ್ನು ಗುರುತಿಸುವರೇ?<br>* ಧನ ಮತ್ತು ಋಣ ಭಾಗಲಬ್ಧ ಸಂಖ್ಯೆಗಳನ್ನು ತಿಳಿಯುವರೇ? |

| ವಿಷಯ : ಗಣಿತ | | ತರಗತಿ : 7 ನೇ ತರಗತಿ | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ– ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ–ತಂತ್ರಗಳು** | **ಶಿಕ್ಷಕರ ಸ್ವ–ಅವಲೋಕನ** |
| * ಭಾಗಲಬ್ಧ ಸಂಖ್ಯೆಗಳನ್ನು ಸಂಖ್ಯಾರೇಖೆಯ ಮೇಲೆ ಗುರುತಿಸುವುದು :<br><br>* ಭಾಗಲಬ್ಧ ಸಂಖ್ಯೆಗಳ ಹೋಲಿಕೆ ಮತ್ತು ಆದರ್ಶ ರೂಪ:<br><br>* ಭಾಗಲಬ್ಧ ಸಂಖ್ಯೆಗಳ ಮೂಲಕ್ರಿಯೆಗಳು : | * ಸಂಖ್ಯಾರೇಖೆಯ ಸಹಾಯದಿಂದ ಭಾಗಲಬ್ಧ ಸಂಖ್ಯೆಗಳನ್ನು ಸಂಖ್ಯಾರೇಖೆಯ ಮೇಲೆ ಗುರುತಿಸುವ ವಿಧಾನವನ್ನು ವಿವರಿಸುವುದು.<br><br>* ಭಾಗಲಬ್ಧ ಸಂಖ್ಯೆಗಳನ್ನು ಕನಿಷ್ಠ ರೂಪದಲ್ಲಿ ಬರೆಯುವುದೇ ಭಾಗಲಬ್ಧ ಸಂಖ್ಯೆಗಳ ಆದರ್ಶ ರೂಪವಾಗಿದೆ ಎಂದು ಉದಾಹರಣೆಗಳ ಮೂಲಕ ತಿಳಿಸುವುದು. ಭಾಗಲಬ್ಧ ಸಂಖ್ಯೆಗಳ ಹೋಲಿಕೆಯನ್ನು ಉದಾಹರಣೆಗಳ ಮೂಲಕ ವಿವರಿಸುವುದು.<br><br>* ಉದಾಹರಣೆಗಳ ಮೂಲಕ ಭಾಗಲಬ್ಧ ಸಂಖ್ಯೆಗಳ ಸಂಕಲನ, ವ್ಯವಕಲನ, ಗುಣಾಕಾರ ಮತ್ತು ಭಾಗಾಕಾರ ಕ್ರಿಯೆಗಳನ್ನು ಮಾಡುವ ವಿಧಾನವನ್ನು ವಿವರಿಸುವುದು. | | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಭಾಗಲಬ್ಧ ಸಂಖ್ಯೆಗಳನ್ನು ಸಂಖ್ಯಾರೇಖೆಯ ಮೇಲೆ ಗುರುತಿಸುವರೇ?<br><br>* ಭಾಗಲಬ್ಧ ಸಂಖ್ಯೆಗಳ ಮೂಲಕ್ರಿಯೆಗಳನ್ನು ಮಾಡುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳನ್ನು ಗುಂಪುಗಳಲ್ಲಿ ವಿಂಗಡಿಸಿ ಒಂದೊಂದು ಗುಂಪಿಗೆ ಭಾಗಲಬ್ಧ ಸಂಖ್ಯೆಗಳ ಮೇಲೆ ಮೂಲ ಕ್ರಿಯೆಗಳ ಲೆಕ್ಕಗಳನ್ನು ನೀಡಿ ಗುಂಪಿನಲ್ಲಿ ಚರ್ಚಿಸಿ ಬಿಡಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಅಭ್ಯಾಸ ಲೆಕ್ಕಗಳು | * ಗುಂಪಿನಲ್ಲಿ ಚರ್ಚಿಸಿ ಲೆಕ್ಕಗಳನ್ನು ಬಿಡಿಸುವರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಮತ್ತು ಅಭ್ಯಾಸ ಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ, ಅಭ್ಯಾಸ ಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಅಭ್ಯಾಸದ ಎಲ್ಲಾ ಲೆಕ್ಕಗಳನ್ನು ಮಾಡಲು ಪ್ರಯತ್ನಿಸುವರೇ? |

**ವಿಷಯ ಶಿಕ್ಷಕರ** **ಸಹಿ ಮುಖ್ಯಗುರುಗಳ ಸಹಿ**

| ವಿಷಯ : ಗಣಿತ | ಪಾಠ ಯೋಜನೆ | ತರಗತಿ : 7 ನೇ ತರಗತಿ |
|---|---|---|
| ಘಟಕದ ಹೆಸರು : ಪ್ರಾಯೋಗಿಕ ರೇಖಾಗಣಿತ | ದಿನಾಂಕ : ರಿಂದ | ವರೆಗೆ |

| ಸಾಮರ್ಥ್ಯಗಳು : | |
|---|---|
| | 1) ದತ್ತ ರೇಖೆಯ ಮೇಲಿಲ್ಲದ ಬಿಂಧುವಿನಿಂದ ಸಮಾಂತರ ರೇಖೆ ರಚಿಸುವುದು. |
| | 2) ಮೂರು ಬಾಹುಗಳ ಅಳತೆಗಳನ್ನು ನೀಡಿದಾಗ ತ್ರಿಭುಜ ರಚಿಸುವುದು. |
| | 3) ಎರಡು ಬಾಹಗಳ ಅಳತೆ ಮತ್ತು ನಡುವಿನ ಕೋನದ ಅಳತೆ ಕೊಟ್ಟಾಗ ತ್ರಿಭುಜ ರಚಿಸುವುದು. |
| | 4) ಎರಡು ಕೋನಗಳ ಅಳತೆ ಮತ್ತು ಸಾಮಾನ್ಯ ಬಾಹುವಿನ ಅಳತೆ ಕೊಟ್ಟಾಗ ತ್ರಿಭುಜ ರಚಿಸುವುದು. |
| | 5) ಲಂಬಕೋನವನ್ನು ಒಳಗೊಂಡ ಒಂದು ಬಾಹುವಿನ ಅಳತೆ ಮತ್ತು ಕರ್ಣದ ಅಳತೆ ಕೊಟ್ಟಾಗ ಲಂಬಕೋನ ತ್ರಿಭುಜ ರಚಿಸುವುದು. |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| **ತೊಡಗಿಸಿಕೊಳ್ಳುವಿಕೆ** | * ಮಕ್ಕಳಿಗೆ ಜ್ಯಾಮಿತಿಯ ಪೆಟ್ಟಿಗೆಯಲ್ಲಿನ ಉಪಕರಣಗಳ ಚಿತ್ರಗಳನ್ನು ಬರೆಯಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಚಿತ್ರ ರಚನೆ | * ಸೂಕ್ತವಾದ ಚಿತ್ರಗಳನ್ನು ರಚಿಸುವರೇ? |
| **ಪತ್ತೆಹಚ್ಚುವಿಕೆ** | * ಮಕ್ಕಳನ್ನು ಗುಂಪುಗಳಲ್ಲಿ ವಿಂಗಡಿಸಿ ಪ್ರತಿ ಗುಂಪಿಗೆ ಸಮತಲಾಕೃತಿಗಳಾದ ತ್ರಿಭುಜ, ಆಯತ, ಚೌಕ ಮತ್ತು ವೃತ್ತಗಳನ್ನು ರಚಿಸಿ, ಅವುಗಳನ್ನ ಪರಿಚಯಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಗುಂಪು ಕಾರ್ಯ | * ಗುಂಪುಗಳಲ್ಲಿ ಸಹಕಾರ ಮನೋಭಾವನೆ ಕಂಡುಬರುವುದೇ? |
| **ವಿವರಣೆ**<br>* ಸಮಾಂತರ ರೇಖೆ ರಚಿಸುವುದು :<br>* ತ್ರಿಭುಜಗಳ ರಚನೆ : | * ದತ್ತ ರೇಖೆಯ ಮೇಲಿಲ್ಲದ ಒಂದು ಬಿಂದುವಿನಿಂದ ದತ್ತ ರೇಖೆಗೆ ಒಂದು ಸಮಾಂತರ ರೇಖೆ ರಚಿಸುವುದನ್ನು ಹಂತ ಹಂತವಾಗಿ ವಿವರಿಸುವುದು.<br>* ಮೂರು ಬಾಹುಗಳ ಅಳತೆ ಕೊಟ್ಟಾಗ ತ್ರಿಭುಜದ ರಚನೆ,<br>* ಎರಡು ಬಾಹುಗಳು ಮತ್ತು ಅವುಗಳ ನಡುವಿನ ಕೋನದ ಅಳತೆ ಕೊಟ್ಟಾಗ ತ್ರಿಭುಜ ರಚನೆ.<br>* ಒಂಧು ತ್ರಿಭುಜದ ಎರಡು ಕೋನಗಳು ಮತ್ತು ಸಾಮಾನ್ಯ ಬಾಹುವಿನ ಅಳತೆ ಕೊಟ್ಟಾಗ ತ್ರಿಭುಜದ ರಚನೆ | ಜ್ಯಾಮಿತಿ ಪೆಟ್ಟಿಗೆ | ತಂತ್ರ : ವಿವರಣೆ<br>ಸಾಧನ : ರಚನೆ ಮಾಡುವುದು | * ಸಮಾಂತರ ರೇಖೆಯನ್ನು ರಚಿಸುವರೇ?<br>* ತ್ರಿಭುಜಗಳನ್ನು ರಚಿಸುವರೇ? |

| ವಿಷಯ : ಗಣಿತ | | ತರಗತಿ : 7 ನೇ ತರಗತಿ | | |
|---|---|---|---|---|
| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
| * ತ್ರಿಭುಜಗಳ ರಚನೆ : | * ಲಂಬಕೋನವನ್ನು ಒಳಗೊಂಡ ಒಂದು ಬಾಹುವಿನ ಅಳತೆ ಮತ್ತು ವಿಕರ್ಣದ ಅಳತೆ ಕೊಟ್ಟಾಗ ತ್ರಿಭುಜದ ರಚನೆಯ ಹಂತಗಳನ್ನು ವಿವರಾವಾಗಿ ವಿವರಿಸುವುದು. | ಜ್ಯಾಮಿತಿ ಪೆಟ್ಟಿಗೆ | ತಂತ್ರ : ವಿವರಣೆ<br>ಸಾಧನ : ರಚನೆ ಮಾಡುವುದು | * ಲಂಬಕೋನ ತ್ರಿಭುಜಗಳನ್ನು ರಚಿಸುವರೇ? |
| ವಿಷಯದ ವಿಸ್ತರಣೆ | * ಮಕ್ಕಳನ್ನು ಗುಂಪುಗಳಲ್ಲಿ ವಿಂಗಡಿಸಿ ಒಂದೊಂದು ಗುಂಪಿಗೆ ತ್ರಿಭುಜ ರಚನೆಗೆ ಸಂಬಂಧಿಸಿದ ಬಾಬಾಬಾ, ಬಾಕೋಬಾ, ಕೋಬಾಕೋ ಮತ್ತು ಲಂಕಬಾ ಸಿದ್ಧಾಂತಗಳ ಮೇಲೆ ಲೆಕ್ಕಗಳನ್ನು ನೀಡಿ ತ್ರಿಭುಜಗಳನ್ನು ರಚಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಅಭ್ಯಾಸ ಚಟುವಟಿಕೆ | * ತ್ರಿಭುಜಗಳನ್ನು ರಚಿಸುವರೇ? |
| ಮೌಲ್ಯಮಾಪನ | * ಪಠ್ಯಪುಸ್ತಕದ ಮತ್ತು ಅಭ್ಯಾಸ ಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ, ಅಭ್ಯಾಸ ಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಅಭ್ಯಾಸದ ಎಲ್ಲಾ ಲೆಕ್ಕಗಳನ್ನು ಮಾಡಲು ಪ್ರಯತ್ನಿಸುವರೇ? |

**ವಿಷಯ ಶಿಕ್ಷಕರ** **ಸಹಿ ಮುಖ್ಯಗುರುಗಳ ಸಹಿ**

| ವಿಷಯ : ಗಣಿತ | ಪಾಠ ಯೋಜನೆ | ತರಗತಿ : 7 ನೇ ತರಗತಿ |
|---|---|---|
| ಘಟಕದ ಹೆಸರು : ಸುತ್ತಳತೆ ಮತ್ತು ವಿಸ್ತೀರ್ಣ | ದಿನಾಂಕ : ರಿಂದ | ವರೆಗೆ |

| | |
|---|---|
| ಸಾಮರ್ಥ್ಯಗಳು : | 1) ಚೌಕ ಮತ್ತು ಆಯತದ ಸುತ್ತಳತೆ ಮತ್ತು ವಿಸ್ತೀರ್ಣ ಕಂಡುಹಿಡಿಯುವುದು. |
| | 2) ಆಯತದ ಭಾಗಗಳಾದ ತ್ರಿಭುಜಗಳ ವಿಸ್ತೀರ್ಣಗಳನ್ನು ಆಯತದ ವಿಸ್ತೀರ್ಣದೊಂದಿಗೆ ಸಮೀಕರಿಸುವುದು. |
| | 3) ಸಮಾಂತರ ಚತುರ್ಭುಜದ ವಿಸ್ತೀರ್ಣ ಮತ್ತು ತ್ರಿಭುಜದ ವಿಸ್ತೀರ್ಣ ಕಂಡುಹಿಡಿಯುವುದು. |
| | 4) ವೃತ್ತದ ಪರಿಧಿ ಮತ್ತು ವಿಸ್ತೀರ್ಣ ಕಂಡುಹಿಡಿಯುವುದು. |
| | 5) ಸುತ್ತಳತೆ ಮತ್ತು ವಿಸ್ತೀರ್ಣಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಿಡಿಸುವುದು. |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| **ತೊಡಗಿಸಿಕೊಳ್ಳುವಿಕೆ** | * ಮಕ್ಕಳನ್ನು ಗುಂಪುಗಳಲ್ಲಿ ವಿಂಗಡಿಸಿ, ಚೌಕ, ಆಯತ, ತ್ರಿಭುಜ, ಮತ್ತು ವೃತ್ತಗಳ ಮಾದರಿಗಳನ್ನು ಡ್ರಾಯಿಂಗ್ ಹಾಳೆಯಲ್ಲಿ ಕತ್ತರಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಮಾದರಿ ತಯಾರಿಕೆ | * ಸೂಕ್ತವಾದ ಮಾದರಿಗಳನ್ನು ತಯಾರಿಸುವರೇ? |
| **ಪತ್ತೆಹಚ್ಚುವಿಕೆ** | * ವಿದ್ಯಾರ್ಥಿಗಳಿಗೆ ತಮ್ಮ ಕಂಪಾಸ್ ಬಾಕ್ಸ್ ಮತ್ತು ಪುಸ್ತಕಗಳ ಸುತ್ತಳತೆ ಕಂಡು ಹಿಡಿಯಲು ತಿಳಿಸುವುದು. | ಕಂಪಾಸ್ ಬಾಕ್ಸ್, ಪುಸ್ತಕಗಳು | ತಂತ್ರ : ಚಟುವಟಿಕೆ<br>ಸಾಧನ : ಯೋಜನೆ | * ಸುತ್ತಳತೆ ಕಂಡು ಹಿಡಿಯುವರೇ? |
| **ವಿವರಣೆ**<br>* ವರ್ಗ ಮತ್ತು ಆಯತಗಳ ಸುತ್ತಳತೆ :<br><br>* ವರ್ಗ ಮತ್ತು ಆಯತಗಳ ವಿಸ್ತೀರ್ಣ : | * ಉದಾಹರಣೆಗಳ ಮೂಲಕ ಸೂತ್ರಗಳ ಸಹಾಯದಿಂದ ವರ್ಗ ಮತ್ತು ಆಯತಗಳ ಸುತ್ತಳತೆ ಕಂಡು ಹಿಡಿಯುವ ವಿಧಾನವನ್ನು ವಿವರಿಸುವುದು.<br>ವರ್ಗದ ಸುತ್ತಳತೆ = 4 × ಬಾಹು<br>ಆಯತದ ಸುತ್ತಳತೆ = 2 × (ಉದ್ದ + ಅಗಲ)<br><br>* ಉದಾಹರಣೆಗಳ ಮೂಲಕ ಸೂತ್ರಗಳ ಸಹಾಯದಿಂದ ವರ್ಗ ಮತ್ತು ಆಯತಗಳ ವಿಸ್ತೀರ್ಣ ಕಂಡು ಹಿಡಿಯುವ ವಿಧಾನವನ್ನು ವಿವರಿಸುವುದು. | ಸೂತ್ರಗಳ ಚಿತ್ರಪಟ | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಸಮಾಂತರ ರೇಖೆಯನ್ನು ರಚಿಸುವರೇ?<br><br>* ತ್ರಿಭುಜಗಳನ್ನು ರಚಿಸುವರೇ? |

| ವಿಷಯ : ಗಣಿತ | | ತರಗತಿ : 7 ನೇ ತರಗತಿ | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ–ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ–ತಂತ್ರಗಳು** | **ಶಿಕ್ಷಕರ ಸ್ವ–ಅವಲೋಕನ** |
| * ಸಮಾಂತರ ಚತುರ್ಭುಜ ಮತ್ತು ತ್ರಿಭುಜದ ವಿಸ್ತೀರ್ಣ :<br><br>* ವೃತ್ತದ ಪರಿಧಿ ಮತ್ತು ವಿಸ್ತೀರ್ಣ : | * ಉದಾಹರಣೆಗಳೊಂದಿಗೆ ಸೂತ್ರ ಸಹಾಯದಿಂದ ಸಮಾಂತರ ಚತುರ್ಭುಜ ಮತ್ತು ತ್ರಿಭುಜದ ವಿಸ್ತೀರ್ಣ ಕಂಡುಹಿಡಿಯುವ ವಿಧಾನಗಳನ್ನು ಹಂತ ಹಂತವಾಗಿ ವಿವರಿಸುವುದು.<br><br>* ಉದಾಹರಣೆಗಳ ಮೂಲಕ ಸೂತ್ರದ ಸಹಾಯದಿಂದ ವೃತ್ತದ ಪರಿಧಿ ಮತ್ತು ವಿಸ್ತೀರ್ಣ ಕಂಡು ಹಿಡಿಯುವ ವಿಧಾನವನ್ನು ವಿವರಿಸುವುದು ಮತ್ತು ವಾಕ್ಯ ರೂಪದ ಸಮಸ್ಯೆಗಳನ್ನು ಬಿಡಿಸುವ ವಿಧಾನಗಳನ್ನು ವಿವರಿಸುವುದು. | ಸೂತ್ರಗಳ ಚಿತ್ರಪಟ | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಸಮಾಂತರ ಚತುರ್ಭುಜ ಮತ್ತು ತ್ರಿಭುಜದ ವಿಸ್ತೀರ್ಣ ಕಂಡುಹಿಡಿಯುವರೇ?<br><br>* ವೃತ್ತದ ಪರಿಧಿ ಮತ್ತು ವಿಸ್ತೀರ್ಣ ಕಂಡು ಹಿಡಿಯುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳನ್ನು ಗುಂಪುಗಳಲ್ಲಿ ವಿಂಗಡಿಸಿ ಒಂದೊಂದು ಗುಂಪಿಗೆ ಒಂದೊಂದು ಸಮತಲಾಕೃತಿಗಳ ವಿಸ್ತೀರ್ಣ ಮತ್ತು ಸುತ್ತಳತೆ ಮೇಲೆ ಲೆಕ್ಕಗಳನ್ನು ನೀಡಿ ಗುಂಪಿನಲ್ಲಿ ಚರ್ಚಿಸಿ ಬಿಡಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಅಭ್ಯಾಸ ಚಟುವಟಿಕೆ | * ಲೆಕ್ಕಗಳನ್ನು ಬಿಡಿಸುವರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಮತ್ತು ಅಭ್ಯಾಸ ಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ, ಅಭ್ಯಾಸ ಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಅಭ್ಯಾಸದ ಎಲ್ಲಾ ಲೆಕ್ಕಗಳನ್ನು ಮಾಡಲು ಪ್ರಯತ್ನಿಸುವರೇ? |

**ವಿಷಯ ಶಿಕ್ಷಕರ** **ಸಹಿ ಮುಖ್ಯಗುರುಗಳ ಸಹಿ**

| ವಿಷಯ : ಗಣಿತ | ಪಾಠ ಯೋಜನೆ | ತರಗತಿ : 7 ನೇ ತರಗತಿ |
|---|---|---|
| ಘಟಕದ ಹೆಸರು : ಬೀಜೋಕ್ತಿಗಳು | ದಿನಾಂಕ : ರಿಂದ ವರೆಗೆ | |

| | |
|---|---|
| ಸಾಮರ್ಥ್ಯಗಳು : | 1) ಬೀಜೋಕ್ತಿಗಳ ಅರ್ಥ ಮತ್ತು ರಚನೆಗಳನ್ನು ತಿಳಿಯುವುದು. |
| | 2) ಬೀಜೋಕ್ತಿಯ ಪದಗಳಲ್ಲಿ ಬೀಜ ಪದದ ಅಪವರ್ತನಗಳು ಮತ್ತು ಗುಣಕಗಳ ಕುರಿತು ಅರಿಯುವುದು. |
| | 3) ಸಜಾತಿ ಮತ್ತು ವಿಜಾತಿ ಪದಗಳನ್ನು ಗುರುತಿಸುವುದು. |
| | 4) ಬೀಜೋಕ್ತಿಗಳನ್ನು ಪದಗಳಿಗೆ ಅನುಗುಣವಾಗಿ ವರ್ಗೀಕರಿಸುವುದು. |
| | 5) ಬೀಜೋಕ್ತಿಗಳ ಮೂಲ ಕ್ರಿಯೆಗಳನ್ನು ಮಾಡುವುದು. |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ– ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ– ಅವಲೋಕನ |
|---|---|---|---|---|
| ತೊಡಗಿಸಿಕೊಳ್ಳುವಿಕೆ | * ವಿದ್ಯಾರ್ಥಿಗಳಿಗೆ ಹಿಂದಿನ ತರಗತಿಯಲ್ಲಿ ಕಲಿತ ವಿಷಯದ ಮೇಲೆ ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ಪಡೆಯುವುದು.<br>1) $a + 5$ ಇದನ್ನು ಹೇಳಿಕೆ ರೂಪದಲ್ಲಿ ಬರೆಯಿರಿ. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪ್ರಶ್ನಾವಳಿ | * ಪೂರ್ವ ಜ್ಞಾನ ಸ್ಮರಿಸಿ ಪ್ರಶ್ನೆಗಳಿಗೆ ಉತ್ತರಿಸುವರೇ? |
| ಪತ್ತೆಹಚ್ಚುವಿಕೆ | * ಚಿತ್ರದಲ್ಲಿನ ABCD ವರ್ಗದ ಸುತ್ತಳತೆ ಕಂಡುಹಿಡಿಯಿರಿ.<br> | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪೂರಕ ಪ್ರಶ್ನೆ | * ಪೂರಕ ಪ್ರಶ್ನೆಗೆ ಉತ್ತರಿಸುವರೇ? |
| ವಿವರಣೆ<br>* ಬೀಜೋಕ್ತಿಗಳ ರಚನೆ :<br><br>* ಬೀಜಪದದ ಅಪವರ್ತನಗಳು : | * ಮಿಂಚುಪಟ್ಟಿಗಳನ್ನು ತೋರಿಸಿ $4 \times y$ ಇರುವುದನ್ನು $4y$ ಎಂದು ಬರೆಯಬಹುದು ಎಂದು ತಿಳಿಸುತ್ತಾ ಇದರಲ್ಲಿ $y$ ಚರಾಕ್ಷರವಾಗಿದ್ದು, $y$ ನ ಬೆಲೆಯು 1,2,3. . . ಹೀಗೆ ಯವುದೇ ಬೆಲೆಯನ್ನು ಪಡೆಯಬಹುದು ಎಂದು ವಿವರಿಸುವುದು. 4 ಸ್ಥಿರಾಂಕವಾಗಿದೆ, ಸ್ಥಿರಾಂಕಗಳೊಂದಿಗೆ ಚರಾಕ್ಷರಗಳು ಸೇರಿ ಬೀಜೋಕ್ತಿಗಳು ರಚನೆಯಾಗುತ್ತವೆ ಎಂದು ವಿವರಿಸುವುದು.<br>* ಒಂದು ಬೀಜಪದವು ಅದರ ಅಪವರ್ತನಗಳ ಗುಣಲಬ್ಧವಾಗಿದೆ ಎಂದು ಉದಾಹರಣೆಗಳ ಮೂಲಕ ವಿವರಿಸುವುದು. | ಮಿಂಚು ಪಟ್ಟಿಗಳು ಚಾರ್ಟ್ | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಬೀಜೋಕ್ತಿಯ ರಚನೆಯ ಬಗ್ಗೆ ತಿಳಿಯುವರೇ?<br><br>* ಬೀಜಪದಗಳ ಅಪವರ್ತನಗಳನ್ನು ಗುರುತಿಸುವರೇ? |

| ವಿಷಯ : ಗಣಿತ | | ತರಗತಿ : 7 ನೇ ತರಗತಿ | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ–ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ–ತಂತ್ರಗಳು** | **ಶಿಕ್ಷಕರ ಸ್ವ–ಅವಲೋಕನ** |
| * ಸಹಗುಣಕಗಳು :<br><br>* ಸಜಾತಿ ಮತ್ತು ವಿಜಾತಿ ಬೀಜ ಪದಗಳು :<br><br>* ಬೀಜೋಕ್ತಿಗಳ ಮೂಲ ಕ್ರಿಯೆಗಳು : | * ಉದಾಹರಣೆಗಳ ಮೂಲಕ ಬೀಜಪದಗಳಲ್ಲಿರುವ ಸಂಖ್ಯಾಸಹಗುಣಕ ಮತ್ತು ಬೀಜ ಸಹಗುಣಕಗಳ ಬಗ್ಗೆ ವಿವರವಾಗಿ ತಿಳಿಸುವುದು.<br><br>* ಉದಾಹರಣೆಗಳ ಮತ್ತು ಮಿಂಚು ಪಟ್ಟಿಗಳ ಮೂಲಕ ಸಜಾತಿ ಮತ್ತು ವಿಜಾತಿ ಬೀಜಪದಗಳ ಅರ್ಥವನ್ನು ತಿಳಿಸಿ, ಅವುಗಳನ್ನು ವರ್ಗೀಕರಣ ಮಾಡುವ ವಿಧಾನವನ್ನು ವಿವರಿಸುವುದು.<br><br>* ಉದಾಹರಣೆಗಳ ಮೂಲಕ ಬೀಜೋಕ್ತಗಳ ಸಂಕಲನ, ವ್ಯವಕಲನ, ಗುಣಾಕಾರ ಮತ್ತು ಭಾಗಾಕಾರ ಕ್ರಿಯೆಗಳನ್ನು ಮಾಡುವ ವಿಧಾನಗಳನ್ನು ವಿವರಿಸುವುದು. | ಮಿಂಚು ಪಟ್ಟಿಗಳು | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಸಹಗುಣಕಗಳನ್ನು ಗುರುತಿಸುವರೇ?<br><br>* ಸಜಾತಿ ಮತ್ತು ವಿಜಾತಿ ಪದಗಳನ್ನು ವರ್ಗೀಕರಿಸುವರೇ?<br><br>* ಬೀಜೋಕ್ತಿಗಳ ಮೂಲ ಕ್ರಿಯೆಗಳನ್ನು ಮಾಡುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳನ್ನು ಗುಂಪುಗಳಲ್ಲಿ ವಿಂಗಡಿಸಿ ಬೀಜೋಕ್ತಿಗಳಿಗೆ ಸಂಬಂಧಿಸಿದ ಸಂಕಲನ ಮತ್ತು ವ್ಯವಕಲನ ಲೆಕ್ಕಗಳನ್ನು ಬಿಡಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಅಭ್ಯಾಸ ಚಟುವಟಿಕೆ | * ಲೆಕ್ಕಗಳನ್ನು ಬಿಡಿಸುವರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಮತ್ತು ಅಭ್ಯಾಸ ಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ, ಅಭ್ಯಾಸ ಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಅಭ್ಯಾಸದ ಎಲ್ಲಾ ಲೆಕ್ಕಗಳನ್ನು ಮಾಡಲು ಪ್ರಯತ್ನಿಸುವರೇ? |

**ವಿಷಯ ಶಿಕ್ಷಕರ** **ಸಹಿ ಮುಖ್ಯಗುರುಗಳ ಸಹಿ**

| ವಿಷಯ : ಗಣಿತ | ಪಾಠ ಯೋಜನೆ | ತರಗತಿ : 7 ನೇ ತರಗತಿ |
|---|---|---|
| ಘಟಕದ ಹೆಸರು : ಘಾತಗಳು ಮತ್ತು ಘಾತಾಂಕಗಳು | ದಿನಾಂಕ : ರಿಂದ | ವರೆಗೆ |

| ಸಾಮರ್ಥ್ಯಗಳು : | |
|---|---|
| | 1) ಘಾತಾಂಕಗಳ ಪರಿಚಯ, ಸಂಖ್ಯೆಗಳನ್ನು ಘಾತಾಂಕ ರೂಪದಲ್ಲಿ ಬರೆಯುವುದು. |
| | 2) ಘಾತಾಂಕಗಳ ನಿಯಮಗಳನ್ನು ಬಳಸುವುದು ಹಾಗೂ ನಿಯಮಗಳನ್ನು ಬಳಸುವುದು. |
| | 3) ದೊಡ್ಡ ಸಂಖ್ಯೆಗಳನ್ನು ಘಾತಾಂಕಗಳ ಆದರ್ಶ ರೂಪದಲ್ಲಿ ಬರೆಯುವುದು. |
| | |
| | |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| ತೊಡಗಿಸಿಕೊಳ್ಳುವಿಕೆ | * ವಿದ್ಯಾರ್ಥಿಗಳಿಗೆ ದೊಡ್ಡ ಸಂಖ್ಯೆಗಳನ್ನು ಬರೆದು ಓದಲು ತಿಳಿಸುವುದು.<br>ಉದಾ : ಭೂಮಿಯ ದ್ರವ್ಯರಾಶಿ 5, 970, 000, 000, 000, 000, 000, 000, 000 ಕೆ.ಜಿ ಗಳು | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪ್ರಶ್ನಾವಳಿ | * ಪೂರ್ವ ಜ್ಞಾನ ಸ್ಮರಿಸಿ ಪ್ರಶ್ನೆಗಳಿಗೆ ಉತ್ತರಿಸುವರೇ? |
| ಪತ್ತೆಹಚ್ಚುವಿಕೆ | * ಶಿಕ್ಷಕರು ಕೆಳಗಿನವುಗಳ ಬೆಲೆ ಕಂಡು ಹಿಡಿಯಲು ತಿಳಿಸುವುದು.<br>1) $3 \times 3 \times 3$ 2) $2 \times 2 \times 2 \times 2 \times 2$<br>3) $4 \times 4$ 4) $5 \times 5 \times 5$ | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪೂರಕ ಪ್ರಶ್ನೆ | * ಪೂರಕ ಪ್ರಶ್ನೆಗೆ ಉತ್ತರಿಸುವರೇ? |
| **ವಿವರಣೆ**<br>* ಘಾತಾಂಕಗಳ ಪರಿಚಯ :<br>* ಘಾತಾ ಸಂಖ್ಯೆಗಳನ್ನು ವಿಸ್ತರಿಸಿ ಬರೆಯುವುದು:<br>* ಸಂಖ್ಯೆಗಳನ್ನು ಘಾತ ರೂಪದಲ್ಲಿ ಬರೆಯವುದು : | * $ಚಿ^{ಟ}$ ಇದರಲ್ಲಿ ಆಧಾರ ಸಂಖ್ಯೆ ಚಿ ಘಾತಸೂಚಿ ಟ ಆಗಿದೆ. ಈ ಘಾತ ಸಂಖ್ಯೆಯನ್ನು ಓದುವ ಕ್ರಮ ಎ ದ ಘಾತ ಎಮ್. ಅನೇಕ ಉದಾಹರಣೆಗಳ ಮತ್ತು ಮಿಂಚು ಪಟ್ಟಿಗಳ ಮೂಲಕ ಘಾತಸೂಚಿ ಮತ್ತು ಆಧಾರ ಸಂಖ್ಯೆಗಳನ್ನು ಗುರುತಿಸುವುದು ಮತ್ತು ಓದುವುದನ್ನು ತಿಳಿಸುವುದು.<br>* ಉದಾಹರಣೆಗಳ ಮೂಲಕ ಘಾತ ಸಂಖ್ಯೆಗಳನ್ನು ವಿಸ್ತರಿಸಿ ಬರೆಯುವ ವಿಧಾನವನ್ನು ವಿವರಿಸುವುದು.<br>* ಅನೇಕ ಉದಾಹರಣೆ ಲೆಕ್ಕಗಳ ಮೂಲಕ ಸಂಖ್ಯೆಗಳನ್ನು ಘಾತಾಂಕ ರೂಪದಲ್ಲಿ ಬರೆಯುವ ವಿಧಾನವನ್ನು ವಿವರಿಸುವುದು. | ಮಿಂಚು ಪಟ್ಟಿಗಳು ಚಾರ್ಟ್ | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಘಾತಾಂಕಗಳನ್ನು ಗುರುತಿಸಿ ವಿಸ್ತರಿಸುವರೇ?<br>* ಸಂಖ್ಯೆಗಳನ್ನು ಘಾತಾಂಕ ರೂಪದಲ್ಲಿ ಬರೆಯುವರೇ? |

| ವಿಷಯ : ಗಣಿತ | | ತರಗತಿ : 7 ನೇ ತರಗತಿ | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ–ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ–ತಂತ್ರಗಳು** | **ಶಿಕ್ಷಕರ ಸ್ವ–ಅವಲೋಕನ** |
| * ಘಾತಾಂಕಗಳ ನಿಯಮಗಳು :<br><br>* ದೊಡ್ಡ ಸಂಖ್ಯೆಗಳನ್ನು ಆದರ್ಶ ರೂಪದಲ್ಲಿ ಬರೆಯುವುದು : | * ಘಾತಾಂಕಗಳ ನಿಯಮಗಳ ಚಿತ್ರ ಪಟದ ಸಹಾಯದಿಂದ ಮತ್ತು ಅನೇಕ ಉದಾಹರಣೆಗಳ ಮೂಲಕ ಘಾತಾಂಕಗಳ ನಿಯಮಗಳನ್ನು ವಿವರಿಸಿ, ಘಾತಾಂಕಗಳ ನಿಯಮಗಳನ್ನು ಉಪಯೋಗಿಸಿ ಲೆಕ್ಕಗಳನ್ನು ಬಿಡಿಸುವ ವಿಧಾನಗಳನ್ನು ವಿವರಿಸುವುದು..<br><br>* ಉದಾಹರಣೆಗಳ ಮತ್ತು ಮಿಂಚು ಪಟ್ಟಿಗಳ ಮೂಲಕ ದೊಡ್ಡ ಸಂಖ್ಯೆಗಳನ್ನು ಆದರ್ಶ ರೂಪದಲ್ಲಿ ಬರೆಯುವ ವಿಧಾನವನ್ನು ವಿವರಿಸುವುದು. | ಮಿಂಚು ಪಟ್ಟಿಗಳು | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಘಾತಾಂಕಗಳ ನಿಯಮಗಳನ್ನು ಅರ್ಥೈಸಿಕೊಂಡು ಲೆಕ್ಕಗಳನ್ನು ಬಿಡಿಸುವರೇ?<br><br>* ದೊಡ್ಡ ಸಂಖ್ಯೆಗಳನ್ನು ಆದರ್ಶ ರೂಪದಲ್ಲಿ ಬರೆಯುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳನ್ನು ಗುಂಪುಗಳಿಗೆ ಒಂದೊಂದು ಘಾತಾಂಕಗಳ ನಿಯಮಗಳನ್ನು ನೀಡಿ ಎರಡು ಉದಾಹರಣೆಗಳೊಂದಿಗೆ ಸಾಮಾನ್ಯೀಕರಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಅಭ್ಯಾಸ ಚಟುವಟಿಕೆ | * ಲೆಕ್ಕಗಳನ್ನು ಬಿಡಿಸುವರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಮತ್ತು ಅಭ್ಯಾಸ ಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ, ಅಭ್ಯಾಸ ಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಅಭ್ಯಾಸದ ಎಲ್ಲಾ ಲೆಕ್ಕಗಳನ್ನು ಮಾಡಲು ಪ್ರಯತ್ನಿಸುವರೇ? |

**ವಿಷಯ ಶಿಕ್ಷಕರ** **ಸಹಿ ಮುಖ್ಯಗುರುಗಳ ಸಹಿ**

| ವಿಷಯ : ಗಣಿತ | ಪಾಠ ಯೋಜನೆ | ತರಗತಿ : 7 ನೇ ತರಗತಿ |
|---|---|---|
| ಘಟಕದ ಹೆಸರು : ಸಮಮಿತಿ | ದಿನಾಂಕ : ರಿಂದ ವರೆಗೆ | |
| ಸಾಮರ್ಥ್ಯಗಳು : | 1) ಸಮಮಿತಿ ಮತ್ತು ನಿಯತ ಬಹುಭುಜಾಕೃತಿಗಳ ಸಮಮಿತಿ ರೇಖೆಗಳನ್ನು ಗುರುತಿಸುವುದು.<br>2) ಸಮತಲಾಕೃತಿಗಳು, ಪರಿಭ್ರಮಣ ಸಮಮಿತಿ ಹಾಗೂ ಆಕೃತಿಗಳನ್ನು 90 ಡಿಗ್ರಿ, 120 ಡಿಗ್ರಿ, 180 ಡಿಗ್ರಿ ಕೋನದಲ್ಲಿ ಪರಿಭ್ರಮಣ ವಾಗಿರುವುದನ್ನು ಗುರುತಿಸುವುದು. | |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ– ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ– ಅವಲೋಕನ |
|---|---|---|---|---|
| **ತೊಡಗಿಸಿಕೊಳ್ಳುವಿಕೆ** | * ವಿದ್ಯಾರ್ಥಿಗಳಿಗೆ ಸಮಮಿತಿ ಮತ್ತು ಸಮಮಿತಿ ಹೊಂದಿಲ್ಲದ ಆಕೃತಿಗಳನ್ನು ಗುರುತಿಸಿ ಪಟ್ಟಿ ಮಾಡಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪಟ್ಟಿ ಮಾಡುವುದು | * ಪೂರ್ವ ಜ್ಞಾನ ಸ್ಮರಿಸಿ ಪಟ್ಟಿಯನ್ನು ತಯಾರಿಸುವರೇ? |
| **ಪತ್ತೆಹಚ್ಚುವಿಕೆ** | * ಈ ಕೆಳಗಿನ ಆಕೃತಿಗಳಲ್ಲಿ ಸಮಮಿತಿ ರೇಖೆಗಳ ಸಂಖ್ಯೆಗಳನ್ನು ಗುರುತಿಸಲು ಹೇಳುವುದು.<br> | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಚಾರ್ಟ್ | * ಸಮಮಿತಿ ರೇಖೆಗಳ ಸಂಖ್ಯೆಗಳನ್ನು ಗುರುತಿಸುವರೇ? |
| **ವಿವರಣೆ**<br>* ಸಮಮಿತಿ ಮತ್ತು ಸಮಮಿತಿ ಅಕ್ಷ : :<br>* ದರ್ಪಣದಲ್ಲಿ ಪ್ರತಿಫಲನ ಸಮಮಿತಿಯನ್ನು ವಿವರಿಸುವುದು : | * ವೃತ್ತ, ಆಯತ, ಚೌಕ, ತ್ರಿಭುಜಗಳನ್ನು ಕಾಗದಗಳ ಮಾದರಿಗಳ ಸಹಾಯದಿಂದ ಸಮಮಿತಿಯ ಆಕೃತಿಗಳ ಪರಿಪಕಲ್ಪನೆ ಮೂಡಿಸಿ, ಸಮಮಿತಿ ಅಕ್ಷವನ್ನು ಗುರುತಿಸಲು ತಿಳಿಸುವುದು.<br><br>* ಉದಾಹರಣೆಗಳ ಮೂಲಕ ದರ್ಪಣದಲ್ಲಿ ಪ್ರತಿಫಲನ ಸಮಮಿತಿಯನ್ನು ವಿವರಿಸುವುದು. | ಮಿಂಚು ಪಟ್ಟಿಗಳು ದರ್ಪಣ | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಸಮಮಿತಿಯನ್ನು ಅರ್ಥೈಸಿಕೊಳ್ಳುವರೇ?<br>* ಪ್ರತಿಫಲನ ಸಮಮಿತಿಯನ್ನು ತಿಳಿಯುವರೇ? |

| ವಿಷಯ : ಗಣಿತ | | ತರಗತಿ : 7 ನೇ ತರಗತಿ | | |
|---|---|---|---|---|
| **ಕಲಿಕೆಯ ಅಂಶಗಳು** | **ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು** | **ಬೋಧನಾ– ಕಲಿಕೋಪಕರಣಗಳು** | **ಮೌಲ್ಯಮಾಪನ ಸಾಧನ–ತಂತ್ರಗಳು** | **ಶಿಕ್ಷಕರ ಸ್ವ–ಅವಲೋಕನ** |
| * ಆವರ್ತ ಸಮಮಿತಿ ಪರಿಭ್ರಮಣ ಸಮಮಿತಿ : | * ಕಾಗದದ ಗಾಳಿ ಯಂತ್ರದ ಸಹಾಯದಿಂದ, ಗಾಳಿಯಂತ್ರವು 360ಲಿ ಕೋನದಲ್ಲಿ ಸುತ್ತಿದರೆ ಗಾಳಿಯ ಯಂತ್ರವು ತನ್ನ ಮೊದಲಿನ ಸ್ಥಾನಕ್ಕೆ ಬರುತ್ತದೆ. ಕಾಲು ಸುತ್ತು ತಿರುಗಿದಾಗ 90° ಕೋನದಲ್ಲಿ, ಅರ್ಧ ಸುತ್ತು ತಿರುಗಿದಾಗ 180° ಕೋನದಲ್ಲಿ, ಮೂರ್ಕ್ಕಾಲು ಸುತ್ತು ತಿರುಗಿದಾಗ 270° ಕೋನದಲ್ಲಿ ಸುತ್ತುತ್ತದೆ ಎಂದು ಚಟುವಟಿಕೆಯ ಮೂಲಕ ವಿವರಿಸುವುದು. | ಮಿಂಚು ಪಟ್ಟಿಗಳು | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಪರಿಭ್ರಮಣ ಸಮಮಿತಿಯನ್ನು ಗುರುತಿಸುವರೇ? |
| **ವಿಷಯದ ವಿಸ್ತರಣೆ** | * ಮಕ್ಕಳನ್ನು ಗುಂಪುಗಳಲ್ಲಿ ವಿಂಗಡಿಸಿ ಸಮಮಿತಿಯ ಆಕೃತಿಗಳನ್ನು ರಚಿಸಿ. ಸಮಮಿತಿಯ ರೇಖೆಗಳನ್ನು ಗುರುತಿಸಲು ತಿಳಿಸುವುದು ಹಾಗೂ ಹಾಳೆಯಲ್ಲಿ ಇಂಕ್ ಮತ್ತು ದಾರದ ಸಹಾಯದಿಂದ ಸಮಮಿತಿಯ ವಿನ್ಯಾಸಗಳನ್ನು ರಚಿಸಲು ಹೇಳುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಅಭ್ಯಾಸ ಚಟುವಟಿಕೆ | * ಅಭ್ಯಾಸ ಚಟುವಟಿಕೆ ಪೂರ್ಣಗೊಳಿಸುವರೇ? |
| **ಮೌಲ್ಯಮಾಪನ** | * ಪಠ್ಯಪುಸ್ತಕದ ಮತ್ತು ಅಭ್ಯಾಸ ಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ, ಅಭ್ಯಾಸ ಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಅಭ್ಯಾಸದ ಎಲ್ಲಾ ಲೆಕ್ಕಗಳನ್ನು ಮಾಡಲು ಪ್ರಯತ್ನಿಸುವರೇ? |

**ವಿಷಯ ಶಿಕ್ಷಕರ** **ಸಹಿ ಮುಖ್ಯಗುರುಗಳ ಸಹಿ**

| ವಿಷಯ : ಗಣಿತ | ಪಾಠ ಯೋಜನೆ | ತರಗತಿ : 7 ನೇ ತರಗತಿ |
|---|---|---|
| ಘಟಕದ ಹೆಸರು : ಘನಾಕೃತಿಗಳು | ದಿನಾಂಕ : ರಿಂದ ವರೆಗೆ | |

| | |
|---|---|
| ಸಾಮರ್ಥ್ಯಗಳು : | 1) ಎರಡು ಆಯಾಮ ಮತ್ತು ಮೂರು ಆಯಾಮದ ಅರ್ಥವನ್ನು ತಿಳಿಯುವುದು. |
| | 2) ಘನಾಕೃತಿಗಳ ಅಂಚುಗಳು, ಮುಖಗಳು ಮತ್ತು ಶೃಂಗಗಳನ್ನು ಗುರುತಿಸುವುದು. |
| | 3) ಚೌಕಳಿ ಕಾಗದದಲ್ಲಿ ಆಕೃತಿಗಳನ್ನು ಚಿತ್ರಿಸುವುದು. |
| | 4) ಘಾನಾಕೃತಿಗಳ ಚಿತ್ರಗಳನ್ನು ಎರಡು ಆಯಾಮಗಳಲ್ಲಿ ಬರೆಯುವುದು. |
| | |

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| **ತೊಡಗಿಸಿಕೊಳ್ಳುವಿಕೆ** | * ಮಕ್ಕಳನ್ನು ಚೌಕ, ಆಯತ, ತ್ರಿಭುಜ ಮತ್ತು ವೃತ್ತಗಳೆಂದು ನಾಲ್ಕು ಗುಂಪುಗಳಲ್ಲಿ ವಿಂಗಡಿಸಿ, ಆಯಾ ಗುಂಪುಗಳಿಗೆ ಆಯಾ ಆಕಾರದಲ್ಲಿರುವ ವಸ್ತುಗಳನ್ನು ಪಟ್ಟಿ ಮಾಡಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಪಟ್ಟಿ ತಯಾರಿಕೆ | * ವಸ್ತುಗಳ ಆಕಾರ ಗುರುತಿಸ ಪಟ್ಟಿ ಮಾಡುವರೇ? |
| **ಪತ್ತೆಹಚ್ಚುವಿಕೆ** | * ಮಕ್ಕಳು ಪಟಟಿ ಮಾಡಿದ ವಸ್ತುಗಳನ್ನು ಸಮತಲಾಕೃತಿಗಳು ಮತ್ತು ಘನಾಕೃತಿಗಳಾಗಿ ವಿಂಗಡಿಸಲು ತಿಳಿಸುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಗುಂಪು ಕಾರ್ಯ | * ಸಮತಲಾ ಕೃತಿಗಳು ಮತ್ತು ಘನಾಕೃತಿಗಳನ್ನು ಗುರುತಿಸುವರೇ? |
| **ವಿವರಣೆ**<br>* ಸಮತಲಾಕೃತಿಗಳು ಮತ್ತು ಘನಾಕೃತಿಗಳು :<br>* ಘನಾಕೃತಿಗಳಲ್ಲಿನ ಮುಖಗಳು, ಅಂಚುಗಳು ಮತ್ತು ಶೃಂಗಗಳು : | * ಕಾಗದದ ಸಮತಲಾಕೃತಿಗಳು ಮತ್ತು ಘನಾಕೃತಿಗಳ ಮಾದರಿಗಳನ್ನು ಪ್ರದರ್ಶಿಸುತ್ತಾ ಎರಡು ಆಯಾಮದ ಮತ್ತು ಮೂರು ಆಯಾಮದ ಆಕೃತಿಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ ವಿವರಿಸುವುದು.<br>ಎರಡು ಆಯಾಮ = ಉದ್ದ ಮತ್ತು ಅಗಲ<br>ಮೂರು ಆಯಾಮ = ಉದ್ದ, ಅಗಲ ಮತ್ತು ಎತ್ತರ<br>* ಘನಾಕೃತಿಗಳ ಮಾದರಿಗಳೊಂದಿಗೆ ಮುಖಗಳು, ಶೃಂಗಗಳು ಮತ್ತು ಅಂಚುಗಳ ಕುರಿತು ವಿವರಿಸಿ, ಆಯತ ಘನ, ಸ್ತಂಭಾಕೃತಿ, ಗೋಲ, ಶಂಕು, ಪಟ್ಟಕ ಮತ್ತು ಗೋಪುರಗಳಲ್ಲಿನ ಮುಖಗಳು, ಶೃಂಗಗಳು ಮತ್ತು ಅಂಚುಗಳ ಬಗ್ಗೆ ವಿವರಿಸುವುದು. | ಚಿತ್ರಪಟಗಳು ಮತ್ತು ಘನಾಕೃತಿಗಳ ಮಾದಿರಗಳು | ತಂತ್ರ : ವಿವರಣೆ<br>ಸಾಧನ : ಮಾದರಿಗಳು | * ಸಮತಾಕೃತಿಗಳು ಮತ್ತು ಘನಾಕೃತಿಗಳನ್ನು ಗುರುತಿಸುವರೇ?<br>* ಘನಾಕೃತಿಗಳ ಅಂಚುಗಳು, ಮುಖಗಳು ಮತ್ತು ಶೃಂಗಗಳನ್ನು ಗುರುತಿಸುವರೇ? |

| ವಿಷಯ : ಗಣಿತ | ತರಗತಿ : 7 ನೇ ತರಗತಿ |
|---|---|

| ಕಲಿಕೆಯ ಅಂಶಗಳು | ಕಲಿಕೆಯನ್ನು ಅನುಕೂಲಿಸಲು ರೂಪಿಸಿದ ಚಟುವಟಿಕೆಗಳು | ಬೋಧನಾ–ಕಲಿಕೋಪಕರಣಗಳು | ಮೌಲ್ಯಮಾಪನ ಸಾಧನ–ತಂತ್ರಗಳು | ಶಿಕ್ಷಕರ ಸ್ವ–ಅವಲೋಕನ |
|---|---|---|---|---|
| * ಘನಾಕೃತಿಗಳ ಜಾಲಾಕೃತಿಳು : | * ವಿವಿಧ ಘನಾಕೃತಿಗಳ ಜಾಲಗಳನ್ನು ಬಿಡಿಸುವುದು ಹಾಗೂ ಗ್ರಾಫ್ ಹಾಳೆಯಲ್ಲಿ ವಿವಿಧ ಆಕೃತಿಗಳನ್ನು ಚಿತ್ರಿಸುವುದು.<br><br> | ಚಿತ್ರಪಟಗಳು ಮತ್ತು ಘನಾಕೃತಿಗಳ ಮಾದಿರಗಳು | ತಂತ್ರ : ವಿವರಣೆ<br>ಸಾಧನ : ಉದಾಹರಣೆಗಳು | * ಘನಾಕೃತಿಗಳ ಜಾಲಾಕೃತಿಗಳನ್ನು ರಚಿಸುವರೇ? |
| ವಿಷಯದ ವಿಸ್ತರಣೆ | * ಮಕ್ಕಳನ್ನು ಗುಂಪುಗಳಲ್ಲಿ ವಿಂಗಡಿಸಿ ರಟ್ಟಿನಲ್ಲಿ ಅಥವಾ ಡ್ರಾಯಿಂಗ್ ಕಾಗದದಲ್ಲಿ ಚೌಕಘನ, ಆಯತಘನ, ಸ್ತಂಭಾಕೃತಿ, ಶಂಕು, ಗೋಪುರಗಳ ಮಾದರಿಗಳನ್ನು ತಯಾರಿಸಲು ಹೇಳುವುದು. | ಚಟುವಟಿಕೆ | ತಂತ್ರ : ಚಟುವಟಿಕೆ<br>ಸಾಧನ : ಯೋಜನೆ | * ಮಾದರಿಗಳನ್ನು ತಯಾರಿಸುವರೇ? |
| ಮೌಲ್ಯಮಾಪನ | * ಪಠ್ಯಪುಸ್ತಕದ ಮತ್ತು ಅಭ್ಯಾಸ ಪುಸ್ತಕದ ಪ್ರಶ್ನೆಗಳು ಮತ್ತು ಚಟುವಟಿಕೆಗಳನ್ನು ಮಾಡಿಸಿ, ಕಪ್ಪು ಹಲಗೆಯ ಮೇಲೆ ಮಕ್ಕಳಿಂದ ಮಾಡಿಸುವುದು ಮತ್ತು ಮಾರ್ಗದರ್ಶಿಸುವುದು. | ಪಠ್ಯಪುಸ್ತಕ, ಅಭ್ಯಾಸ ಪುಸ್ತಕ | ತಂತ್ರ : ಮೌಲ್ಯಮಾಪನ<br>ಸಾಧನ : ಪ್ರಶ್ನೆಗಳು | * ಅಭ್ಯಾಸದ ಎಲ್ಲಾ ಲೆಕ್ಕಗಳನ್ನು ಮಾಡಲು ಪ್ರಯತ್ನಿಸುವರೇ? |

**ವಿಷಯ ಶಿಕ್ಷಕರ** **ಸಹಿ ಮುಖ್ಯಗುರುಗಳ ಸಹಿ**